# ತಮಿಳುನಾಡಿನ ತೀರ್ಥಕ್ಷೇತ್ರಗಳು

ಶಶಿಕಲಾ ಶ್ರೀಧರ್

ತಮಿಳುನಾಡು ಸಾಂಸ್ಕೃತಿಕವಾಗಿ ಭವ್ಯ ಪರಂಪರೆಯನ್ನು ಹೊಂದಿರುವ ಪ್ರದೇಶವಾಗಿದೆ. ಉನ್ನತೋನ್ನತ ಗೋಪುರಗಳಿರುವ ಬೃಹತ್ ಮಂದಿರಗಳು, ಶೈವ-ವೈಷ್ಣವಾದಿ ಮತಗಳ ಹಿನ್ನೆಲೆಯಲ್ಲಿ ಪ್ರಸಿದ್ಧವಾದ ಪುಣ್ಯಕ್ಷೇತ್ರಗಳು ಯಾತ್ರಾರ್ಥಿಗಳ ಮನಸ್ಸನ್ನು ಆಕರ್ಷಿಸುತ್ತವೆ. ಭಾರತದ ತೀರ್ಥಕ್ಷೇತ್ರಗಳಲ್ಲಿ ತಮಿಳುನಾಡಿನ ಪ್ರದೇಶಗಳು ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಈ ಕುರಿತು ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.

**ಭಾ**ರತ ತೀರ್ಥಕ್ಷೇತ್ರಗಳ ದೇಶ. ಭಾರತೀಯರ ಬಾಳಿನಲ್ಲಿ ತೀರ್ಥಕ್ಷೇತ್ರಗಳ ಯಾತ್ರೆ, ಪ್ರಾಚೀನ ದೇಗುಲಗಳ ದರ್ಶನ ಇವು ಒಂದು ಧಾರ್ಮಿಕ ಆಚರಣೆ. ಯಾತ್ರಿಕರು ಈ ಯಾತ್ರೆಗಳಲ್ಲಿ ಒದಗಬಹುದಾದ ಎಲ್ಲ ರೀತಿಯ ಕಷ್ಟಗಳನ್ನು ಎದುರಿಸಲು ಸಿದ್ಧರಾಗಿಯೇ ಯಾತ್ರೆಗೆ ಹೊರಡುತ್ತಾರೆ. ಕ್ಷೇತ್ರದರ್ಶನದ ಬಗ್ಗೆ ಅವರಲ್ಲಿರುವ ಆಳವಾದ ಶ್ರದ್ಧೆಯೇ ಎಲ್ಲ ಕಷ್ಟಗಳನ್ನು ಸಹಿಸಲು ಶಕ್ತಿಯನ್ನೊದಗಿಸುತ್ತದೆ. ಮಾತ್ರವಲ್ಲ ಈ ಯಾತ್ರೆಗಳು ಭಾರತದ ವಿವಿಧ ಭಾಗಗಳಲ್ಲಿ ವಾಸಿಸುವ ವಿವಿಧ ಜನರನ್ನು ಸಂಧಿಸುತ್ತಾ ಅವರೆಲ್ಲರೊಡನೆ ಭಾವಪೂರ್ಣ ಅನುಬಂಧವನ್ನು ಹೊಂದುತ್ತಾರೆ. ಪವಿತ್ರ ಕ್ಷೇತ್ರಗಳಿಗೆ ಹೋಗಿ ಪವಿತ್ರ ನದಿ, ಸಂಗಮ, ಸರೋವರ, ಸಾಗರಗಳಲ್ಲಿ ಮಿಂದು ಪುನೀತರಾಗುತ್ತಾರೆ. ಉತ್ತರ ಭಾರತದ ತೀರ್ಥಕ್ಷೇತ್ರಗಳಲ್ಲಿ ಅವುಗಳಿರುವ ಸುಂದರ ಪ್ರಕೃತಿಯ ಪರಿಸರದ ಆನಂದವನ್ನೂ ಅನುಭವಿಸುತ್ತಾರೆ. ದಕ್ಷಿಣ ಭಾರತದ ದೇಗುಲಗಳಲ್ಲಿನ ಅತ್ಯದ್ಭುತ ಶಿಲ್ಪಕಲೆಗಳಿಗೆ ಬೆರಗಾಗುತ್ತಾರೆ. ಇನ್ನು ದೇವತಾ ಮೂರ್ತಿಗಳನ್ನಂತೂ ಒಮ್ಮೆ ದರ್ಶಿಸಿದರೆ ಹೃದಯ, ಕಂಗಳಲ್ಲಿ ಸ್ಥಿರವಾಗಿ ನಿಂತು, ಭಕ್ತಿಭಾವ ಉಕ್ಕಿ ಹರಿದು ಆನಂದವನ್ನುಂಟು ಮಾಡುತ್ತವೆ.

ಈ ಕ್ಷೇತ್ರಗಳಲ್ಲಿ ನಮಗೇಕೆ ಆನಂದ ಉಂಟಾಗುತ್ತದೆ? ಮನಸ್ಸು ಹೇಗೆ ಉತ್ತಮ ಸ್ತರದಲ್ಲಿ ಸಂಚರಿಸುತ್ತದೆ? ಕಾರಣ, ಶತಮಾನಗಳಿಂದ ಭಾರತದಲ್ಲಿ ಜನಿಸಿದ ಮಹಾಪುರುಷರು, ಋಷಿಗಳು, ಯತಿಗಳು, ಯೋಗಿಗಳು, ಅವತಾರಪುರುಷರು ಈ ಪವಿತ್ರ ಕ್ಷೇತ್ರಗಳಿಗೆ ಆಗಮಿಸಿದಾಗ, ಅವರು ತಮ್ಮೊಳಗಿನ ಆಧ್ಯಾತ್ಮಶಕ್ತಿಯನ್ನು ಇಲ್ಲಿ ಹರಿಸಿ, '**ತೀರ್ಥೀಕುರ್ವಂತಿ ತೀರ್ಥಾನಿ**' ಎಂಬ ನುಡಿಗೆ ನಿದರ್ಶನವಾಗುತ್ತಾರೆ. ಇತರ ಪಾಮರ ಜನರನ್ನು ಮೇಲೆತ್ತಲೆಂದೇ ಅವತರಿಸುವ ಈ ಎಲ್ಲ ಮಹಾಪುರುಷರು ತಮ್ಮ ತಪಶ್ಶಕ್ತಿಯನ್ನೆರೆದು, ಪತಿತರನ್ನು ಮೇಲೆತ್ತಿ ಪುನೀತರನ್ನಾಗಿ ಮಾಡುತ್ತಾರೆ. ಇದರ ಲಾಭ ಪಡೆಯಲೆಂದೇ ಎಲ್ಲ ಆಸ್ತಿಕರು ಶ್ರದ್ಧಾಭಕ್ತಿಗಳಿಂದ ಪುಣ್ಯಕ್ಷೇತ್ರಗಳಿಗೆ ಧಾವಿಸಿ ದೇವದೇವತೆಗಳ, ದೇವಾಲಯಗಳ ದರ್ಶನ ಮಾಡುತ್ತಾರೆ.

ಸಾಮಾನ್ಯವಾಗಿ ಈ ಪವಿತ್ರ ದೇವಾಲಯಗಳು ನದಿ, ಸರೋವರ ಇಲ್ಲವೇ ಸಮುದ್ರದ ದಡಗಳಲ್ಲಿ ಅಥವಾ ಎತ್ತರದ ಬೆಟ್ಟಗುಡ್ಡ ಪರ್ವತಶ್ರೇಣಿಗಳಲ್ಲಿ, ಪ್ರಕೃತಿಯ ಸೌಂದರ್ಯದಿಂದ ಕೂಡಿರುವ ಭವ್ಯ ತಾಣಗಳಲ್ಲಿರುತ್ತವೆ. ಬಾಹ್ಯ ಇಂದ್ರಿಯಗಳಿಗೂ ಆನಂದ ನೀಯುವ ಈ ಮನೋಹರ ಪ್ರದೇಶಗಳು ದೇವಾಲಯದ ಗರ್ಭಗೃಹಕ್ಕೆ ಹೋದಾಗ ಅಂತರಂಗದಲ್ಲೂ ಆನಂದವನ್ನೀಯುವ ಪವಿತ್ರ ತೀರ್ಥಸ್ಥಳಗಳಾಗುತ್ತವೆ.

ಇಡೀ ಭಾರತಭೂಮಿಯೇ ಒಂದರ್ಥದಲ್ಲಿ ತೀರ್ಥಕ್ಷೇತ್ರ. ಉತ್ತರದ ಅಮರನಾಥದಿಂದ ದಕ್ಷಿಣತುದಿಯ ಕನ್ಯಾಕುಮಾರಿಯವರೆಗೆ, ಪೂರ್ವದ ಪುರಿಜಗನ್ನಾಥನಿಂದ ಪಶ್ಚಿಮದ ಸೋಮನಾಥ ದೇಗುಲದವರೆಗೆ ಪರಮಪಾವನ ತೀರ್ಥಕ್ಷೇತ್ರಗಳಿಂದ ತುಂಬಿ ಹೋಗಿದೆ ನಮ್ಮ ಭಾರತ ಭೂಮಿ. ಇಲ್ಲಿನ ಕಣಕಣಗಳೂ ಪವಿತ್ರ– 'ಗಾಯಂತಿ ದೇವಾಃ ಕಿಲ ಗೀತಕಾನಿ' –ದೇವತೆಗಳೇ ಇದರ ಧನ್ಯತೆಯನ್ನು ಕೊಂಡಾಡುತ್ತಿದ್ದಾರೆ, ಇಲ್ಲಿ ಜನಿಸಿ ಮುಕ್ತರಾಗಲು ತವಕಿಸುತ್ತಾರೆ. ತ್ರೇತಾಯುಗದಿಂದ ಕಲಿಯುಗದವರೆಗೂ ಋಷಿಮುನಿಗಳು, ಯೋಗಿಗಳು, ಅವತಾರಪುರುಷರೆಲ್ಲರು ಭಾರತದ ಈ ಎಲ್ಲ ತೀರ್ಥಕ್ಷೇತ್ರಗಳಲ್ಲಿ ತಮ್ಮ ತಪಶ್ಶಕ್ತಿಯನ್ನೆರೆದು ಮತ್ತೂ ಪಾವನವನ್ನಾಗಿ ಮಾಡಿದ್ದಾರೆ, ಮಾಡುತ್ತಿದ್ದಾರೆ, ಮುಂದೆಯೂ ಮಾಡುತ್ತಾರೆ. ಈ ಕ್ಷೇತ್ರಗಳಲ್ಲಿ ಪ್ರಾಚೀನ ಶಿಲ್ಪಶಾಸ್ತ್ರಕ್ಕನುಸಾರವಾಗಿ ನಿರ್ಮಿಸಿದ ಸುಂದರ ಶಿಲ್ಪಕಲೆಯ ಗೋಪುರ, ಪ್ರಾಕಾರ, ಅನೇಕ ಮಂಟಪ, ಸರೋವರಗಳು, ಸುಂದರ ವಿಗ್ರಹಗಳು, ಮೂಲದೇವರು ಇವುಗಳನ್ನು ದರ್ಶಿಸಿ ಆನಂದಿಸುವುದಲ್ಲದೆ ಮತ್ತೂ ಆಳವಾಗಿ ಇಳಿದು ಇವುಗಳ ಮರ್ಮವರಿತು ಮಾಡಿದ ಯಾತ್ರೆ ಅರ್ಥವತ್ತಾಗಿ ಪರಿಪೂರ್ಣ ವಾಗುತ್ತದೆ. ಈ ಕ್ಷೇತ್ರಗಳ ಸ್ಥಳಪುರಾಣ ನಮ್ಮನ್ನು ಇವುಗಳ ಮೂಲವಾದ ಇತಿಹಾಸ ಪುರಾಣಗಳಿಗೆ ಕೊಂಡೊಯ್ಯುತ್ತವೆ.

ಇಂತಹ ಮಹತ್ತ್ವವುಳ್ಳ ತೀರ್ಥಕ್ಷೇತ್ರಗಳಲ್ಲಿ ದಕ್ಷಿಣಭಾರತದ ತಮಿಳುನಾಡಿನಲ್ಲಿ ಭಕ್ತಿಮಾಹಾತ್ಮ್ಯಗಳಿಂದ ಓತಪ್ರೋತವಾಗಿರುವ ಕೆಲವು ಬಹು ಮುಖ್ಯವಾದ ತೀರ್ಥಕ್ಷೇತ್ರಗಳನ್ನು ಮಾನಸಿಕವಾಗಿ ದರ್ಶಿಸಿ ಬರೋಣ :

**ಪಂಚಭೂತ ಕ್ಷೇತ್ರಗಳು :** ಪೃಥ್ವಿ (ಭೂಮಿ), ಅಪ್ (ಜಲ), ಅನಲ (ಅಗ್ನಿ), ವಾಯು (ಗಾಳಿ)ಮತ್ತು ಖಂ (ಆಕಾಶ) ಈ ಪಂಚಭೂತಗಳ ಕ್ಷೇತ್ರವಾಗಿ ಕಂಗೊಳಿಸುತ್ತಿರುವ ಪಂಚಲಿಂಗಕ್ಷೇತ್ರಗಳಲ್ಲಿ ನಾಲ್ಕು ಕ್ಷೇತ್ರಗಳು ತಮಿಳುನಾಡಿನಲ್ಲೂ, ವಾಯುಲಿಂಗ ಕ್ಷೇತ್ರವು ಆಂಧ್ರ ಪ್ರದೇಶದ ಕಾಳಹಸ್ತಿಯಲ್ಲೂ ಇವೆ.

### ೧. ಪೃಥ್ವೀತತ್ತ್ವಲಿಂಗ : ಕಂಚಿಯ ಏಕಾಂಬರೇಶ್ವರ ಶಿವಕ್ಷೇತ್ರ :

ಮೋಕ್ಷದಾಯಿನಿ ಸಪ್ತಪುರಿಗಳಲ್ಲಿ ಒಂದಾಗಿರುವ ಕಂಚೀ ನಗರದಲ್ಲಿ ಶಿವಕಂಚೀ ದೇಗುಲವೆಂದು ಕರೆಯುವ ಶ್ರೀಏಕಾಂಬರೇಶ್ವರ ದೇಗುಲ ಪಂಚಭೂತ ತತ್ತ್ವಗಳಲ್ಲಿ ಒಂದಾದ ಪೃಥ್ವೀತತ್ತ್ವವನ್ನು ಪ್ರತಿಪಾದಿಸುವ ದಿವ್ಯಕ್ಷೇತ್ರವಾಗಿದೆ. ೯ನೇ ಶತಮಾನದ ಚೋಳ ರಾಜರ ಆಳ್ವಿಕೆಯಲ್ಲಿ ನಿರ್ಮಿತವಾಗಿ ಅತ್ಯಂತ ವಿಶಾಲವಾಗಿರುವ ಈ ದೇಗುಲ ನಾಲ್ಕು ದ್ವಾರಗೋಪುರಗಳಿಂದ ಭೂಷಿತವಾಗಿದೆ. ಇವುಗಳಲ್ಲಿನ ರಾಜಗೋಪುರ ೧೯೪ ಅಡಿಗಳಷ್ಟು ಎತ್ತರವಾಗಿದೆ. ಇದು ಶಿವಕಂಚಿಯ ದೇಗುಲಗಳಲ್ಲಿ ಅತಿಮುಖ್ಯವಾದ ಮಂದಿರವಾಗಿದೆ. ಈ ದೇಗುಲದ ದಕ್ಷಿಣದ್ವಾರಗೋಪುರದ ಎದುರಿಗಿರುವ ಮಂಟಪದ ಸ್ತಂಭಗಳಲ್ಲಿ ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿರುವ ಅನೇಕ ಮೂರ್ತಿಗಳು ಅತ್ಯಂತ ಚೇತೋಹಾರಿಯಾಗಿವೆ.

ಏಕಾಂಬರೇಶ್ವರನ ಗರ್ಭಗುಡಿಯನ್ನು ಸೇರಲು ಮೂರು ದ್ವಾರಗಳನ್ನು ದಾಟಿ ಹೋಗಬೇಕು. ಈ ಶಿವಲಿಂಗವು ಮರಳಿನಿಂದ ನಿರ್ಮಿತವಾದುದರಿಂದ ಸ್ವಾಮಿಗೆ ಇಲ್ಲಿ ಜಲಾಭಿಷೇಕವಿಲ್ಲ. ಚಮೇಲಿಯ (ಮಲ್ಲಿಗೆಯ ಒಂದು ಜಾತಿಯ ಪುಷ್ಪ) ಸುಗಂಧಿತ ತೈಲದಿಂದ ಅಭಿಷೇಕಮಾಡಲಾಗುತ್ತದೆ. ಇಲ್ಲಿಯ ದೇವಿಯು ಏಳವರ್‌ಕುಳಲಿ ಎಂದಿದ್ದರೂ ದೇವಿಗೆ ಪ್ರತ್ಯೇಕ ದೇಗುಲವಿಲ್ಲ. ಕಂಚಿಯ ಕಾಮಾಕ್ಷಿ ದೇವಿಯೇ ಏಕಾಂಬರೇಶ್ವರ ಶಿವನ ಸತಿ ಎನ್ನುತ್ತಾರೆ.

ವಾಹನ ಮಂಟಪ, ನವರಾತ್ರಿಮಂಟಪ, ಸಾವಿರಕಂಬ ಮಂಟಪಗಳಿರುವ ಈ ದೇಗುಲದಲ್ಲಿ ೧೦೮ ಶಿವಲಿಂಗಗಳು, ೬೪ ಯೋಗಿನಿಯರ ವಿಗ್ರಹಗಳನ್ನು ಕಾಣಬಹುದು. ಮಾತ್ರವಲ್ಲ, ಗಣಪತಿ, ಕಾರ್ತಿಕೇಯ, ನಟರಾಜ, ನವಗ್ರಹಗಳ ಸುಂದರ ವಿಗ್ರಹಗಳನ್ನು ದರ್ಶಿಸಬಹುದು. ಇದಲ್ಲದೆ ಶಿವಗಂಗಾ ಸರೋವರದಲ್ಲಿ ಉತ್ಸವ ಮೂರ್ತಿಗಳ ಜಲವಿಹಾರವನ್ನು ದರ್ಶಿಸುವುದು ಭಕ್ತರ ಪಾಲಿಗೆ ವಿಶೇಷ ಹಬ್ಬವಾಗುವುದು.

ಈ ದೇವಾಲಯದ ಪ್ರಾಂಗಣದಲ್ಲಿ ೩೫೦೦ ವರ್ಷಗಳಷ್ಟು ಹಿಂದಿನದೆಂದು ಹೇಳಲಾದ ಅತ್ಯಂತ ಪ್ರಾಚೀನ ಮಾವಿನ ಮರವೊಂದಿದೆ. ಈ ಮರದಡಿಯೇ ಪಾರ್ವತಿದೇವಿ ಪರಶಿವನನ್ನು ಕುರಿತು ತಪಸ್ಸು ಮಾಡಿದಳೆಂದು ಭಕ್ತರು ಈ ಮರಕ್ಕೆ ಪ್ರದಕ್ಷಿಣೆ ನಮಸ್ಕಾರವನ್ನು ಸಲ್ಲಿಸುತ್ತಾರೆ. ಇಲ್ಲಿ ಪಾರ್ವತಿಯ ತಪೋಮೂರ್ತಿಯನ್ನು ಕಾಣಬಹುದು.

### ೨. ಜಲತತ್ತ್ವಲಿಂಗ : ತಿರುಚಿಯ ಶ್ರೀ ಜಂಬುಕೇಶ್ವರ ದೇವಾಲಯ

ಇದು ಶ್ರೀರಂಗಕ್ಷೇತ್ರಕ್ಕಿಂತಲೂ ಪ್ರಾಚೀನವಾದ ಕ್ಷೇತ್ರ. ಅತ್ಯಂತ ವಿಶಾಲವಾದ ಈ ಕ್ಷೇತ್ರದಲ್ಲಿ ಮೂರು ಪ್ರಾಕಾರಗಳಿವೆ. ಪ್ರಥಮ ಪ್ರಾಕಾರದಿಂದ ಸಾಗುವಾಗ ೪೦೦ ಸ್ತಂಭಗಳ ಒಂದು ಸುಂದರ ಮಂಟಪವನ್ನು ಕಾಣಬಹುದು. ಈ ಅಂಗಣದ ಬಲಭಾಗದಲ್ಲಿ ವಿಸ್ತಾರವಾದ ತೆಪ್ಪಾಕುಲಂ ಎಂಬ ಸುಂದರ ಕೊಳವಿದೆ. ಈ ಕಲ್ಯಾಣಿಯ ಮಧ್ಯದಲ್ಲಿ ಒಂದು ಮಂಟಪವಿದೆ. ವರ್ಷಕ್ಕೊಮ್ಮೆ ಶ್ರೀರಂಗದಿಂದ ಶ್ರೀರಂಗನಾಥನ ಉತ್ಸವಮೂರ್ತಿಯನ್ನು ಇಲ್ಲಿಗೆ ಕರೆತಂದು ತೆಪ್ಪೋತ್ಸವದಲ್ಲಿ ಮಧ್ಯದ ಮಂಟಪಕ್ಕೆ ಕರೆತಂದು ಇಳಿಸಿ ಪೂಜಿಸಲಾಗುವುದು.

ಇಲ್ಲಿನ ಅಂಗಣದ ಎಡಭಾಗದಲ್ಲಿ ಒಂದು ದೊಡ್ಡ ಮಂಟಪವೂ, ಅದರೆದುರಿಗೆ ಸಹಸ್ರಸ್ತಂಭ ಮಂಟಪವೂ, ಒಂದು ಚಿಕ್ಕ ಕಲ್ಯಾಣಿಯೂ ಇದೆ.

ಐದನೆಯ ಪ್ರಾಕಾರದಲ್ಲಿ ಜಲಪ್ರವಾಹದ ಮೇಲೆ ಸ್ಥಾಪಿತವಾಗಿರುವ ಶ್ರೀ ಜಂಬುಕೇಶ್ವರ ಜಲತತ್ತ್ವಲಿಂಗ ದರ್ಶನ ಪಡೆಯಬಹುದು. ಈ ಸ್ವಾಮಿಯ ಚೌಕಾಕಾರದ ಗರ್ಭಗುಡಿಯು ಜಲದಿಂದ ಆವೃತವಾಗಿರುತ್ತದೆ. ಕಂಚಿನ ನಂದಿ ಮೂರ್ತಿಯು ಸ್ವಾಮಿಯ ಎದುರಿಗೆ ಶೋಭಿಸುತ್ತಿದೆ. ಈ ಗುಡಿಯ ಹಿಂಬಾಗದಲ್ಲಿ ಜಂಬೂನೇರಳೆಹಣ್ಣಿನ ಒಂದು ಪ್ರಾಚೀನ ವೃಕ್ಷವಿದೆ. ಈ ವೃಕ್ಷದ ಹೆಸರಿನಲ್ಲಿ ಇಲ್ಲಿನ ಶಿವಲಿಂಗವು ಜಂಬುಕೇಶ್ವರ ಲಿಂಗವೆಂದು ಖ್ಯಾತಿ ಪಡೆಯಿತು ಎನ್ನುತ್ತದೆ ಇಲ್ಲಿನ ಸ್ಥಳಪುರಾಣ. ಶ್ರೀ ಶಂಕರಭಗವತ್ಪಾದರು ಇಲ್ಲಿಗೆ ಬಂದು ಜಂಬುಕೇಶ್ವರನನ್ನು ಪೂಜಿಸಿದುದರಿಂದ ಶಂಕರಾಚಾರ್ಯರ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುತ್ತಿದ್ದಾರೆ.

ಈ ದೇಗುಲದ ಮತ್ತೊಂದು ವೈಶಿಷ್ಟ್ಯ ಇಲ್ಲಿರುವ ಶತಸ್ತಂಭ ಮಂಟಪ, ಸಹಸ್ರಸ್ತಂಭ ಮಂಟಪ, ನವರಾತ್ರಿ ಮಂಟಪ, ವಸಂತ ಮಂಟಪ, ಧ್ವಜಸ್ತಂಭ ಮಂಟಪ, ಸೋಮಸ್ಕಂದ ಮಂಟಪ, ನಟರಾಜ ಮಂಟಪ ಮತ್ತು ತ್ರಿಮೂರ್ತಿ ಮಂಟಪ. ಇವುಗಳಲ್ಲಿ ಶ್ರೀರಾಮನಿಂದಲೇ ಸ್ಥಾಪಿಸಲ್ಪಟ್ಟಿದೆ ಎನ್ನಲಾದ ಸೋಮಸ್ಕಂದ ಮಂಟಪ ಅದ್ಭುತವಾದ ಶಿಲ್ಪಕಲೆಯಿಂದ ತುಂಬಿದೆ. ಪ್ರದಕ್ಷಿಣೆ ಬರುವಾಗ ರಾಜರಾಜೇಶ್ವರ ಗುಡಿಯಲ್ಲಿ ಅಪರೂಪದ ಪಂಚಮುಖಿ ಶಿವಲಿಂಗವನ್ನು ದರ್ಶಿಸಬಹುದು. ಇದೇ ಪ್ರಾಕಾರದಲ್ಲಿ ಭಗವತಿ ಅಖಿಲಾಂಡೇಶ್ವರಿಯ ತೇಜೋದ್ದೀಪ್ತ ಭವ್ಯಮೂರ್ತಿಯನ್ನು ಸಂದರ್ಶಿಸಬಹುದು. ಈ ಭಗವತಿಯು ಮೊದಲು ಅತ್ಯಂತ ಉಗ್ರಮೂರ್ತಿಯಾಗಿದ್ದಳಂತೆ. ಅವಳನ್ನು ದರ್ಶಿಸಿದ ಭಕ್ತರು ಅಲ್ಲೇ ಪ್ರಾಣತ್ಯಾಗ ಮಾಡಿಬಿಡುತ್ತಿದ್ದರಂತೆ. ಶ್ರೀ ಶಂಕರ ಭಗವತ್ಪಾದರು ಈ ದೇಗುಲಕ್ಕೆ ಆಗಮಿಸಿದಾಗ ತಾಯಿಯ ಈ ಉಗ್ರತೇಜಸ್ಸನ್ನು ಕಡಿಮೆ ಮಾಡಲು ಆಕೆಯ ಕರ್ಣಗಳನ್ನು ವಜ್ರಖಚಿತ ಶ್ರೀಯಂತ್ರದ ಕುಂಡಲಗಳಿಂದ ಅಲಂಕರಿಸಿ, ಅವಳ ಸಮ್ಮುಖದಲ್ಲೇ ಅವಳ ಕಂದ ಶ್ರೀಗಣೇಶನ ವಿಗ್ರಹವನ್ನು ಪತಿಷ್ಠಾಪಿಸಿ ಆಕೆಯನ್ನು ವಾತ್ಸಲ್ಯಮೂರ್ತಿಯಾಗಿ ಪರಿವರ್ತಿಸಿದರು ಎನ್ನುತ್ತಾರೆ ಇಲ್ಲಿಯ ಪ್ರಧಾನ ಅರ್ಚಕರು! ಇದು ಉಪದೇಶ ಸ್ಥಳವಾದುದರಿಂದ ಇಲ್ಲಿ ಕಲ್ಯಾಣೋತ್ಸವವು ನಡೆಯದು. ಇಲ್ಲಿ ಜಂಬುಕೇಶ್ವರನೇ ಗುರು ಮತ್ತು ಪಾರ್ವತಿ ಅವನ ಶಿಷ್ಯೆ.

**ಸ್ಥಳಪುರಾಣ :** ಋಷಿಗಳೊಬ್ಬರು ಇಲ್ಲಿ ಭಗವಾನ್ ಶಂಕರನ ಆರಾಧನೆ ಮಾಡುತ್ತಿದ್ದರು. ಇದು ಜಂಬೂವೃಕ್ಷಗಳ ವನವಾಗಿದ್ದುದರಿಂದ ಈ ಋಷಿಗಳನ್ನು ಜಂಬೂಋಷಿ ಎಂದೇ ಕರೆಯುತ್ತಿದ್ದರು. ಇವರ ತಪಶ್ಚರ್ಯೆಯಿಂದ ಪ್ರಸನ್ನಗೊಂಡ ಭಗವಾನ್ ಶಂಕರನು ಪ್ರತ್ಯಕ್ಷನಾಗಿ ಅವರ ಇಚ್ಛೆಯ ಮೇರೆಗೆ ಅಲ್ಲಿಯೇ ಶಿವಲಿಂಗರೂಪದಲ್ಲಿ ನಿತ್ಯಸ್ಥಿತನಾದ. ಈ ಸ್ಥಳದಲ್ಲಿ ಶಿವಲಿಂಗದ ಮೇಲೆ ಜಂಬೂವೃಕ್ಷದ ಎಲೆಗಳು ಉದುರುತ್ತಿದ್ದುದನ್ನು ಕಂಡ ಜೇಡವೊಂದು ಲಿಂಗದ ಮೇಲೆ ಎಲೆಗಳು ಉದುರದಿರಲು ಲಿಂಗದ ಸುತ್ತಲೂ ತನ್ನ ಬಲೆಯನ್ನು ಹೆಣೆಯುತ್ತಿತ್ತು. ಶಿವಲಿಂಗದ ಮೇಲೆ ಈ ಕಸವನ್ನು

ಕಂಡ ಆನೆಯೊಂದು ತನ್ನ ಸೊಂಡಿಲಿನಲ್ಲಿ ನೀರನ್ನು ತಂದು ಲಿಂಗದ ಮೇಲೆ ಸುರಿದು ಜೇಡರಬಲೆಯನ್ನು ತೆಗೆದು ಶುದ್ಧ ಮಾಡುತ್ತಿತ್ತು. ಇದರಿಂದ ಇಬ್ಬರೂ ಪರಸ್ಪರ ಕೋಪಗೊಂಡರು. ಒಂದು ದಿನ ಜೇಡವನ್ನು ಕೊಲ್ಲಲು ಆನೆ ಸೊಂಡಿಲನ್ನು ಎತ್ತಿದಾಗ ಜೇಡ ಆನೆಯ ಸೊಂಡಿಲನ್ನು ಸೇರಿಕೊಂಡುಬಿಟ್ಟ ಕಾರಣ ಇಬ್ಬರೂ ಸಾವನ್ನಪ್ಪಿದರು. ಇವರೀರ್ವರ ಉದ್ದೇಶ ಶುದ್ಧವಾಗಿದ್ದುದರಿಂದ ಜಂಬುಕೇಶ್ವರನು ಪ್ರಸನ್ನನಾಗಿ ಇಬ್ಬರನ್ನೂ ಬದುಕಿಸಿ ತನ್ನ ಪಾರ್ಷದರನ್ನಾಗಿ ನೇಮಿಸಿಕೊಳ್ಳುತ್ತಾನೆ. ಇವರಿಬ್ಬರೂ ಪೂರ್ವದಲ್ಲಿ ಮಾಲ್ಯವಾನ್ ಮತ್ತು ಪುಷ್ಪದಂತ ಎಂಬ ಶಿವಗಣದವರೇ ಆಗಿದ್ದರು ಎನ್ನುತ್ತದೆ ಪುರಾಣ.

ಈ ಕಥೆಯು ಜಂಬುಕೇಶ್ವರದೇವಾಲಯದ ಮಂಟಪದ ಒಂದು ಸ್ತಂಭದಲ್ಲಿ ಕೆತ್ತಲ್ಪಟ್ಟಿದೆ. ತಮಿಳಿನಲ್ಲಿರುವ ಶಿಲಾಶಾಸನದಲ್ಲೂ ಈ ಕಥೆಯ ವಿವರವನ್ನು ಕಾಣಬಹುದು.

### ೩. ಅಗ್ನಿತತ್ತ್ವಲಿಂಗ: ತಿರುವಣ್ಣಾಮಲೆಯ ಶ್ರೀ ಅರುಣಾಚಲೇಶ್ವರ

ಸ್ಕಂದಪುರಾಣದಲ್ಲಿ ಉಲ್ಲೇಖವಾಗಿರುವ ಮಹಾಕ್ಷೇತ್ರ ತಿರುವಣ್ಣಾಮಲೆಯ ಅರುಣಾಚಲ ಲಿಂಗ. ಸಾಕ್ಷಾತ್ ಪರಶಿವನು ಪರ್ವತ ರೂಪದಲ್ಲಿ ಅರುಣಾಚಲ ಎಂಬ ನಾಮಧೇಯದಿಂದ ಇಲ್ಲಿ ಪ್ರಕಟನಾಗಿದ್ದಾನೆ. ಈ ಪರ್ವತದಡಿಯಲ್ಲಿರುವ ಪುಣ್ಯಕ್ಷೇತ್ರವೇ ಶ್ರೀ ಅರುಣಾಚಲೇಶ್ವರನ ದಿವ್ಯ ಸನ್ನಿಧಿ. ಇಲ್ಲಿಯ ಸ್ವಾಮಿ ಅಗ್ನಿತತ್ತ್ವ ಲಿಂಗಸ್ವರೂಪ. ೯ನೇ ಶತಮಾನದಲ್ಲಿ ಚೋಳರಾಜರಿಂದ ಕಟ್ಟಲ್ಪಟ್ಟು, ಮುಂದೆ ಬಂದ ಅನೇಕ ರಾಜರುಗಳಿಂದ ಜೀರ್ಣೋದ್ಧಾರ ಕಾರ್ಯಗಳನ್ನು ಕಂಡ ಈ ದೇಗುಲ ಈಗ ನಾಲ್ಕೂ ದಿಕ್ಕಿನಲ್ಲಿ ಅತ್ಯಂತ ಎತ್ತರವಾದ ಗೋಪುರಗಳನ್ನುಳ್ಳ ದಿವ್ಯ ಭವ್ಯ ದೇಗುಲವಾಗಿದೆ. ಈ ದೇಗುಲದಲ್ಲಿರುವ ಸಾವಿರ ಸ್ತಂಭ ಮಂಟಪ ವಿಜಯನಗರ ಸಾಮ್ರಾಜ್ಯದ ಅರಸರು ನಿರ್ಮಿಸಿದುದು. ಇದರ ಪ್ರಥಮ ಪ್ರಾಕಾರದಲ್ಲಿ ಸುಂದರ ಸರೋವರವಿದೆ. ಭಕ್ತರು ಇಲ್ಲಿ ಪವಿತ್ರ ಸ್ನಾನ ಮಾಡಿ ಶಿವನ ದರ್ಶನ ಮಾಡುತ್ತಾರೆ. ಚಿಕ್ಕ ಗೋಪುರವನ್ನು ದಾಟಿ ಮುಂದೆ ಹೋದಾಗ ದ್ವಿತೀಯ ಪ್ರಾಕಾರದ ದಕ್ಷಿಣಭಾಗದಲ್ಲಿ ಕಲ್ಯಾಣಿಯೊಂದನ್ನು ಕಾಣಬಹುದು. ಕುಡಿಯಲು ಯೋಗ್ಯವಾದ ಶುದ್ಧ ನೀರಿರುವ ಈ ಕಲ್ಯಾಣಿಯಲ್ಲಿ ಸ್ನಾನ ನಿಷಿದ್ಧ. ಮತ್ತೊಂದು ಚಿಕ್ಕ ಗೋಪುರವನ್ನು ದಾಟಿಹೋದಾಗ ಮೂರನೆಯ ಪ್ರಾಕಾರದಲ್ಲಿ ಪಂಚದ್ವಾರಗಳನ್ನು ಹೊಕ್ಕು ಹೋದಾಗ ಶ್ರೀಅರುಣಾಚಲೇಶ್ವರ ಗರ್ಭಗುಡಿಯಲ್ಲಿ ಅಗ್ನಿಲಿಂಗವನ್ನು ದರ್ಶಿಸಬಹುದು. ಇಲ್ಲಿರುವ ನಂದಿ ಹಾಗೂ ಸೂರ್ಯನ ವಿಗ್ರಹಗಳು ಅತ್ಯಂತ ಪ್ರಾಚೀನವಾದುವು. ಅಲ್ಲಿಂದ ಗರ್ಭಗುಡಿಗೆ ಪ್ರದಕ್ಷಿಣೆ ಬರುವಾಗ ಪಾರ್ವತಿ, ಗಣೇಶ, ನವಗ್ರಹ, ದಕ್ಷಿಣಾಮೂರ್ತಿ, ನಟರಾಜ, ಶಿವಗಣ ಮುಂತಾದ ಸುಂದರ ಶಿಲ್ಪಕಲೆಯ ವಿಗ್ರಹಗಳನ್ನು ದರ್ಶಿಸಬಹುದು.

ಕೆಲವು ದ್ವಾರಗಳನ್ನು ದಾಟಿ ಹೋದರೆ ಅನ್ನಾಮಲೈ ಅಮ್ಮನ್ ಎಂದು ಕರೆಯಲ್ಪಡುವ ದೇವಿ ಪಾರ್ವತಿಯ ಗರ್ಭಗುಡಿಯನ್ನು ಸೇರಬಹುದು. ಇದು ಅತ್ಯಂತ ದೊಡ್ಡಮಂದಿರ. ಅನ್ನಾಮಲೈ ಅಮ್ಮನ ವಿಗ್ರಹವು ದಿವ್ಯವೂ ಭವ್ಯವೂ ಆಗಿದೆ. ಇದೇ ಪ್ರಾಕಾರದಲ್ಲಿರುವ ೧೬ ಸ್ತಂಭಗಳ ದೀಪದರ್ಶನ ಮಂಟಪವೂ ಸುಂದರವಾಗಿದೆ.

ಈ ದೇಗುಲದೊಳಗೆಯೇ ಅನೇಕ ಮೆಟ್ಟಿಲುಗಳನ್ನು ಇಳಿದು ಹೋದರೆ ಪಾತಾಳಲಿಂಗವನ್ನು ಕಾಣಬಹುದು. ಇದು ಶ್ರೀರಮಣ ಮಹರ್ಷಿಗಳು ಕೆಲಕಾಲ ತಪಸ್ಸು ಮಾಡಿದ ಸ್ಥಳ.

ಪ್ರತಿ ಹುಣ್ಣಿಮೆಯಂದು ಸಹಸ್ರಾರು ಭಕ್ತರು ಅರುಣಾಚಲ ಗಿರಿ ಪರಿಕ್ರಮವನ್ನು ಶ್ರದ್ಧಾಭಕ್ತಿಗಳಿಂದ ಮಾಡುತ್ತಾರೆ. ಕಾರ್ತಿಗೈ ದೀಪಂ ಇಲ್ಲಿನ ಅತಿಮುಖ್ಯ ಉತ್ಸವ. ಅಂದು ದೇವಾಲಯವೆಲ್ಲವೂ ದೀಪಜ್ಯೋತಿಗಳಿಂದ ಪ್ರಜ್ವಲಿಸುತ್ತದೆ. ಅಂದು ಅರುಣಾಚಲ ಬೆಟ್ಟದ ಮೇಲೆ ಬಹುದೊಡ್ಡ ಅಗ್ನಿಜ್ವಾಲೆಯನ್ನು ದರ್ಶಿಸಬಹುದು. ಅಗ್ನಿಲಿಂಗ ಆಕಾಶಕ್ಕೆ ಸೇರಿಕೊಳ್ಳುವುದನ್ನು ಸಾಂಕೇತಿಕವಾಗಿ ಸೂಚಿಸುತ್ತಿದೆಯೋ ಎಂಬಂತೆ ಅತ್ಯಂತ ಭವ್ಯವಾಗಿ ಗೋಚರಿಸುವುದು.

**ಸ್ಥಳಪುರಾಣ :** ಒಮ್ಮೆ ಬ್ರಹ್ಮ ವಿಷ್ಣು ಇಬ್ಬರೂ ತಮ್ಮಿಬ್ಬರಲ್ಲಿ ಯಾರು ಶ್ರೇಷ್ಠ ಎಂದು ಸ್ಪರ್ಧಿಸುತ್ತಿದ್ದಾಗ, ಶಿವಮಹಾದೇವನು ಅವರೆದುರು ಅಗ್ನಿರೂಪದಲ್ಲಿ ಕಾಣಿಸಿಕೊಂಡು ತನ್ನ ಸ್ವರೂಪದ ಮೂಲವನ್ನು ಕಂಡುಹಿಡಿಯಲು ಹೇಳುತ್ತಾನೆ. ಇದಕ್ಕೆ ಸಮಾಧಾನವನ್ನು ಹುಡುಕಲು ಬ್ರಹ್ಮದೇವರು ಶ್ವೇತಹಂಸಪಕ್ಷಿಯ ರೂಪವನ್ನು ತಳೆದು ಅಗ್ನಿಮೂಲವನ್ನು ಕಂಡುಹಿಡಿಯಲು ಆಕಾಶದೆಡೆಗೆ ಹಾರುತ್ತಾನೆ. ವಿಷ್ಣು ವರಾಹರೂಪ ತಳೆದು ಪಾತಾಳದೆಡೆಗೆ ಹೋಗುತ್ತಾನೆ. ಆದರೆ ಇಬ್ಬರೂ ಈ ಕಾರ್ಯದಲ್ಲಿ ಅಸಮರ್ಥರಾಗುತ್ತಾರೆ. ಸರ್ವಶಕ್ತ ಪರಶಿವನೆದುರು ಉಳಿದವರೆಲ್ಲರೂ ಅತಿಸಣ್ಣವರೆಂಬ ಅನುಭವವಾಗುವುದು.

ಈ ಕಥೆಯ ಶಿಲ್ಪವನ್ನು ಅನೇಕ ಶಿವಮಂದಿರಗಳಲ್ಲಿ ಕಾಣುತ್ತೇವೆ. ಇದನ್ನು ಲಿಂಗೋದ್ಭವ ಎಂದು ಕರೆಯುತ್ತಾರೆ.

**ರಮಣಾಶ್ರಮ**

ಈ ಯುಗದ ಅತಿಶ್ರೇಷ್ಠ ಸಂತರಲ್ಲಿ ಒಬ್ಬರಾದ ಶ್ರೀರಮಣ ಮಹರ್ಷಿಗಳು ದಕ್ಷಿಣಭಾರತದಲ್ಲಿ ಅತ್ಯಂತ ಪ್ರಸಿದ್ಧ ಸಂತರು. ಇವರು ಈ ಕ್ಷೇತ್ರದ ಅರುಣಾಚಲ ಬೆಟ್ಟದ ಅನೇಕ ಸ್ಥಳಗಳಲ್ಲಿ ಕಠೋರ ತಪಸ್ಸನ್ನು ಆಚರಿಸಿ, ಆತ್ಮಸಾಕ್ಷಾತ್ಕಾರವನ್ನು ಪಡೆದ ಮಹಾಜ್ಞಾನಿಗಳು. ಮರಣವನ್ನು ಗೆದ್ದ ಋಷಿಸದೃಶರು. ಆಸ್ತಿಕ ಭಕ್ತರು ಅತ್ಯಂತ ಶ್ರದ್ಧೆಯಿಂದ ಶ್ರೀರಮಣರು ತಪಸ್ಸು ಮಾಡಿದ ಸ್ಥಳಗಳನ್ನು ದರ್ಶಿಸಿ, ಭಕ್ತಿಪೂರ್ವಕಪ್ರಣಾಮಗಳನ್ನು ಸಲ್ಲಿಸುತ್ತಾರೆ. ಈ ಪವಿತ್ರಸ್ಥಳಗಳಲ್ಲಿ ತಾವೂ ಸ್ವಲ್ಪಕಾಲ ಧ್ಯಾನ ಮಾಡಿ ಮನಶ್ಶಾಂತಿಯನ್ನು ಪಡೆಯುತ್ತಾರೆ.

ಅರುಣಾಚಲ ಬೆಟ್ಟದ ಅಡಿಯಲ್ಲಿ ಸಾಗುವ ರಸ್ತೆಯ ಬದಿಯಲ್ಲಿಯೇ ಶ್ರೀರಮಣಮಹರ್ಷಿಗಳ ಆಶ್ರಮವಿದೆ. ಈ ಆಶ್ರಮದ ಪ್ರಶಾಂತವಾತಾವರಣದಲ್ಲಿ ಸುತ್ತಲೂ ನಿರ್ಭಯವಾಗಿ ಓಡಾಡುವ ಜಿಂಕೆ ನವಿಲು ಬಾತುಕೋಳಿಗಳನ್ನು ನೋಡುವುದೇ ಆನಂದ. ಒಳಗೆ ಮಹರ್ಷಿಗಳಿಂದ ಪೂಜಿಸಲ್ಪಟ್ಟ ದೇವಿಯ ವಿಗ್ರಹವಿದೆ. ಪಕ್ಕದಲ್ಲಿ ಶ್ರೀ ರಮಣರು ಸಾಕ್ಷಾತ್ತಾಗಿ ಕುಳಿತಿರುವರೋ ಎಂಬಂತಿರುವ ಸುಂದರ ವಿಗ್ರಹವಿದೆ. ಅಲ್ಲಿಂದ ಮುಂದೆ ಪ್ರದಕ್ಷಿಣೆ ಬರುವಾಗ ಮಹರ್ಷಿಗಳ ಸಮಾಧಿಸ್ಥಳವನ್ನೂ ದರ್ಶಿಸಬಹುದು.

ಇಂದಿಗೂ ಶ್ರೀರಮಣಾಶ್ರಮವನ್ನು ಪ್ರವೇಶಿಸಿದಾಗ ಅವರ ತಪ ಶ್ಶಕ್ತಿಯ ಮಹಿಮೆಯಿಂದ ಅಲ್ಲಿಯ ವಾತಾವರಣದಲ್ಲಿರುವ ಆಧ್ಯಾತ್ಮಿಕ ತರಂಗಗಳ ಅನುಭವವನ್ನು ಸಾಮಾನ್ಯ ಸಾಧಕರೂ ಕಂಡುಕೊಳ್ಳಬಹುದು ಎಂಬುದು ಸತ್ಯವಾದ ಸಂಗತಿಯಾಗಿದೆ.

### ೪. ಆಕಾಶತತ್ತ್ವಲಿಂಗ : ಶ್ರೀಚಿದಂಬರ ಕ್ಷೇತ್ರ

ದಕ್ಷಿಣಭಾರತದ ೨೦೦೦ ವರ್ಷಗಳ ಹಿಂದಿನ ಅತ್ಯಂತ ಪ್ರಮುಖ ಕ್ಷೇತ್ರ ಚಿದಂಬರ. ಸುಪ್ರಸಿದ್ಧ ನಟರಾಜಮೂರ್ತಿಯ ಪವಿತ್ರ ಕ್ಷೇತ್ರ. ಪಂಚಭೂತಗಳಲ್ಲಿನ ಆಕಾಶತತ್ತ್ವವನ್ನು ಪ್ರತಿಪಾದಿಸುವ, ದಹರಾಕಾಶದ ಪರಂಜ್ಯೋತಿಯ ಪ್ರತಿಪಾದ್ಯನಾಗಿರುವ ಸ್ವಾಮಿಯ ದಿವ್ಯಪ್ರದೇಶ. ಇದನ್ನು ತಿಲ್ಲೈ ನಟರಾಜ ದೇವಾಲಯ ಎಂದು ಕರೆಯುತ್ತಾರೆ. ೧೦ನೇ ಶತಮಾನದಲ್ಲಿ ಚಿದಂಬರವು ಚೋಳರಾಜರ ರಾಜಧಾನಿಯಾಗಿತ್ತು. ನಟರಾಜ ಅವರ ಕುಲದೈವವಾಗಿತ್ತು. ಅತ್ಯಂತ ಪ್ರಾಚೀನವಾದ ಕಲೆಯೊಡೆಯನ ಈ ದೇವಾಲಯ ಅಚ್ಚರಿಮೂಡಿಸುವ ಅಪರೂಪ ಶಿಲ್ಪಕಲೆಗಳಿಂದ ಕಂಗೊಳಿಸುತ್ತಿದೆ. ಇಲ್ಲಿನ ಶಿಲ್ಪಗಳಲ್ಲಿ ಕಲೆ ಮತ್ತು ಅಧ್ಯಾತ್ಮ ಎರಡರ ಸುಂದರ ಮಿಲನವಿದೆ. ದೇಗುಲದಲ್ಲಿ ೭ ಮಜಲುಗಳು ಹಾಗೂ ೧೩ ಕಲಶಗಳುಳ್ಳ ೯ ದ್ವಾರಗೋಪುರಗಳಿವೆ. ಗೋಪುರದಲ್ಲಿ ಶಿವಶಿವೆಯರ ಕಲ್ಯಾಣ, ವಿಷ್ಣುಮೂರ್ತಿಯೇ ಮುಂತಾದ ಬಣ್ಣದ ಶಿಲ್ಪಗಳಿದ್ದು ಅತ್ಯಂತ ಸುಂದರವಾಗಿದೆ. ಪೂರ್ವಗೋಪುರದಲ್ಲಿ ೧೦೮ ನಾಟ್ಯ ಭಂಗಿಗಳ ವಿಗ್ರಹಗಳಿವೆ.

ಪ್ರಥಮ ಪ್ರಾಕಾರವನ್ನು ದಾಟಿ ಎರಡನೆಯ ಪ್ರಾಕಾರಕ್ಕೆ ಹೋಗುವ ಮಾರ್ಗದಲ್ಲಿ ಒಂಭತ್ತು ಅಂತಸ್ತುಗಳ ದೊಡ್ಡ ಗೋಪುರವಿದೆ. ಇದರಲ್ಲಿ ನಾಟ್ಯಶಾಸ್ತ್ರದಲ್ಲಿ ಉಲ್ಲೇಖವಾಗಿರುವ ಅನೇಕ ನಾಟ್ಯಭಂಗಿಗಳ, ಮುದ್ರೆಗಳ ಮೂರ್ತಿಗಳಿವೆ. ಮೂರನೆಯ ಪ್ರಾಕಾರದ ಗೋಪುರದೆದುರು ನಂದಿಯ ದೊಡ್ಡ ವಿಗ್ರಹವಿದೆ. ಇಲ್ಲಿಂದ ಮುಂದೆ ಸಿಗುವ ಪ್ರಾಕಾರವೇ ನಟರಾಜನ ಗರ್ಭಗುಡಿಯೆಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಈ ಪ್ರಾಕಾರದ ಗೋಡೆಗಳ ಮೇಲೆ ನಂದಿಯ ವಿಗ್ರಹಗಳು ರಾಜಿಸುತ್ತಿವೆ. ಐದನೆಯ ಪ್ರಾಕಾರದಲ್ಲಿ ನಟರಾಜನ ಭವ್ಯ ಮೂರ್ತಿಯನ್ನು ದರ್ಶಿಸುತ್ತೇವೆ. ಇದರೆದುರಿಗೇ ನಟರಾಜನ ಸಭಾಮಂಟಪವಿದೆ. ಈ ಸಭೆಯ ಸ್ತಂಭಗಳಲ್ಲಿ ಸುಂದರ ಮೂರ್ತಿಗಳು ಕೆತ್ತಲ್ಪಟ್ಟಿವೆ. ನಟರಾಜನ ಗರ್ಭಗುಡಿ ಕಪ್ಪುಶಿಲೆಗಳಿಂದ ಕಟ್ಟಲ್ಪಟ್ಟು ಇದರ ಮೇಲಿನ ವಿಮಾನ ಗೋಪುರ ಸ್ವರ್ಣಪತ್ರದಿಂದ ಆಚ್ಛಾದಿತವಾಗಿದೆ. ನಟರಾಜನ ದಿವ್ಯ ಮಂಗಳಮೂರ್ತಿಯೂ ಸ್ವರ್ಣದಿಂದಲೇ ನಿರ್ಮಿತವಾಗಿದೆ. ಈ ಸ್ವಾಮಿಯ ನಾಟ್ಯಭಂಗಿಯನ್ನು ದರ್ಶಿಸಿದಾಗ ರೋಮಾಂಚನವಾಗುವುದು ಸತ್ಯ. ಈ ತಾಂಡವ ನಟರಾಜ ಮೂರ್ತಿ ಪಾದದ ಅಡಿಯಲ್ಲಿರುವ ರಾಕ್ಷಸ ಅಪಸ್ಮಾರ ಅಜ್ಞಾನದ ಸಂಕೇತ. ಸೂರ್ಯ ಚಂದ್ರ ಅಗ್ನಿಗಳ ತ್ರಿನೇತ್ರ, ಕೈಯಲ್ಲಿರುವ ಅಗ್ನಿ ದುಷ್ಟಶಕ್ತಿನಿವಾರಕ, ಅಭಯಮುದ್ರೆ ಎಲ್ಲರ ರಕ್ಷಕ, ಅರ್ಧಚಂದ್ರ ಔದಾರ್ಯ ಮತ್ತು ಸೌಂದರ್ಯದ ಪ್ರತೀಕ, ಕಮಲಪೀಠ ಓಂಕಾರದ ಸಂಕೇತ ಎನ್ನುತ್ತಾರೆ. ಇದರ ಸಮೀಪದಲ್ಲಿ ತುಂಬುರು, ನಾರದರ, ಪಾರ್ವತೀ ದೇವಿಯ ಚಿಕ್ಕ ಚಿಕ್ಕ ಸ್ವರ್ಣಮೂರ್ತಿಗಳಿವೆ. ದೇಗುಲದ ಗೋಡೆಗಳ ಶಿಲ್ಪದಲ್ಲಿ ಭರತಮುನಿಯ ನಾಟ್ಯಶಾಸ್ತ್ರದ ೧೦೮ ಕರಣಗಳನ್ನು (ನೃತ್ಯದಲ್ಲಿ ಕೈಗಳಿಂದಾದ ಅಭಿನಯ) ಕಾಣಬಹುದು. ಇದಲ್ಲದೆ ೫೦ ಸ್ತಂಭಗಳ ನೃತ್ಯಸಭಾ, ಸಾವಿರ ಸ್ತಂಭಗಳ ರಾಜಸಭಾ, ೧೦೦ ಸ್ತಂಭಗಳ ಶತಶಿಲಾಸಭಾ ಎಲ್ಲವೂ ಅದ್ಭುತ! ಪ್ರಾಚೀನಕಂಚಿನ ವಿಗ್ರಹಗಳ ಸಂಗ್ರಹವಂತೂ ಅತ್ಯದ್ಭುತವಾಗಿದೆ.

ಈ ನಟರಾಜಸ್ವಾಮಿಯ ಎಡಭಾಗದಲ್ಲಿ ಒಂದು ಕಪ್ಪು ಗೋಡೆಯಲ್ಲಿ ಒಂದು ಯಂತ್ರವಿದೆ. ಅದನ್ನಿಲ್ಲಿ ಬಂಗಾರದ ಹಾರಗಳಿಂದ ಸಿಂಗರಿಸಲಾಗಿದೆ. ಇಲ್ಲಿನ ನೀಲಿ ಬಣ್ಣದ ಶೂನ್ಯಾಕಾರವನ್ನೇ ಆಕಾಶತತ್ತ್ವಲಿಂಗವೆಂದು ಕರೆಯಲಾಗಿದೆ. ಇಲ್ಲಿ ಸ್ಫಟಿಕದ ಚಂದ್ರಮೌಳೀಶ್ವರ ಮತ್ತು ನೀಲಂನ ರತ್ನಸಭಾಪತಿ ಎಂದು ಕರೆಯಲ್ಪಡುವ ಎರಡು ಶಿವಲಿಂಗಗಳನ್ನು ಸಂಪುಷ್ಟದಲ್ಲಿ ಇರಿಸಿರುತ್ತಾರೆ. ಈ ಸ್ಥಳವು ಪರದೆಯಿಂದ ಮುಚ್ಚಲ್ಪಟ್ಟಿರುತ್ತದೆ. ಅಭಿಷೇಕದ ಸಮಯದಲ್ಲಿ ತೆರೆದಿರುತ್ತಾರೆ. ಇದೇ ಚಿದಂಬರ ರಹಸ್ಯದ ಪವಿತ್ರ ಸ್ಥಳ.


ನಟರಾಜನ ಎದುರಿಗಿರುವ ಮಂಟಪದ ಬಲಭಾಗದಲ್ಲಿ ಗೋವಿಂದ ರಾಜಸ್ವಾಮಿಯ ಗರ್ಭಗುಡಿ ಇದೆ. ಶ್ರೀಮನ್ನಾರಾಯಣನ ಸುಂದರ ಶೇಷಶಾಯಿ ವಿಗ್ರಹವನ್ನು, ಪುಂಡರೀಕವಲ್ಲಿಯನ್ನು (ಲಕ್ಷ್ಮಿ),ಅತ್ಯಂತ ಸುಂದರವಾದ ಉತ್ಸವಮೂರ್ತಿಗಳನ್ನು ಇಲ್ಲಿ ದರ್ಶಿಸಬಹುದು. ಸೂರ್ಯಭಗವಾನನ ಗುಡಿಯಲ್ಲಿ ಮೂರು ಶಿರಸ್ಸಿನ, ಎಂಟು ಕೈಗಳ, ಸೂರ್ಯದೇವನು ಉಷಾ ಮತ್ತು ಪ್ರತ್ಯೂಷರೊಡನೆ, ಅರುಣನ ಸಾರಥ್ಯದಲ್ಲಿ ಸಪ್ತಾಶ್ವಗಳ ರಥದಲ್ಲಿ ಕುಳಿತಿರುವ ಸುಂದರ ವಿಗ್ರಹವಿದೆ.

ನಟರಾಜಮಂದಿರದ ಹೊರಭಾಗದಲ್ಲಿ ಸಭಾಮಂಟಪದ ಎದುರಿನಲ್ಲಿ ಭಗವಾನ್ ಶಂಕರನ ಲಿಂಗರೂಪಿ ವಿಗ್ರಹವಿದೆ. ಇದೇ ಚಿದಂಬರ ಕ್ಷೇತ್ರದ ಮೂಲ ವಿಗ್ರಹ. ಮಹರ್ಷಿ ವ್ಯಾಘ್ರಪಾದರು ಹಾಗೂ ಪತಂಜಲಿ ಮಹರ್ಷಿಗಳು ಈ ಶಿವಲಿಂಗವನ್ನು ಅರ್ಚಿಸಿದಾಗ, ಇವರೀರ್ವರ ಆರಾಧನೆಗೆ ಪ್ರಸನ್ನನಾದ ಪರಮೇಶ್ವರನು ಪ್ರತ್ಯಕ್ಷನಾಗಿ ಅವರಿಚ್ಛೆಯ ಮೇರೆಗೆ ಆನಂದತಾಂಡವನೃತ್ಯ ಮಾಡಿದುದರ ಪ್ರತೀಕವೇ ಇಲ್ಲಿನ ನಾಟ್ಯರಾಜ ನಟರಾಜಮೂರ್ತಿ.

ಚಿದಂಬರದೇಗುಲದ ದೊಡ್ಡ ಉತ್ಸವಗಳು ಮಹಾಶಿವರಾತ್ರಿ ಮತ್ತು ತಿರುವಾದಿರೈ.

### ೫. ಮಧುರೈ ಮೀನಾಕ್ಷಿಯ ಮಹಾದೇಗುಲ

ದೇವರಾಜ ಇಂದ್ರ ವೃತ್ರಾಸುರನಿಂದ ಯುದ್ಧದಲ್ಲಿ ಸೋಲಿಸಲ್ಪಟ್ಟಾಗ ಅವನು ಭೂಲೋಕಕ್ಕೆ ಬಂದು ಮಾನವರೂಪ ತಾಳಿ ಕಾಡಿನೊಳಗೆ ಸುತ್ತಾಡುತ್ತಿದ್ದಾಗ ಒಂದು ಸ್ಥಳದಲ್ಲಿ ಅವನಿಗೆ ಅತ್ಯಂತ ಆನಂದವೂ ಶಾಂತಿಯೂ ಅನುಭವಕ್ಕೆ ಬರುತ್ತದೆ. ಅಲ್ಲಿ ಹುಡುಕಿದಾಗ ಶಿವಲಿಂಗವೊಂದು ಗೋಚರಿಸುತ್ತದೆ. ಅತ್ಯಂತ ಭಕ್ತಿಯಿಂದ ಅದನ್ನು ಆರಾಧಿಸಿದಾಗ ಶಿವ ಪ್ರತ್ಯಕ್ಷನಾಗಿ ಅವನು ಕಳೆದುಕೊಂಡಿದ್ದ ಇಂದ್ರಲೋಕಾಧಿಪತ್ಯವನ್ನು ಮರಳಿ ಕೊಡಿಸುತ್ತಾನೆ. ಇಂದ್ರ ಪೂಜಿಸಿದ ಶಿವಲಿಂಗ ಅಲ್ಲಿನ ಭೂಪ್ರದೇಶದ ರಾಜನಿಗಾದ ಅದ್ಭುತ ಸ್ವಪ್ನದಲ್ಲಿ ಗೋಚರಿಸಿ ಅಲ್ಲೆಲ್ಲಾ ಅಮೃತವು ಸುರಿದ ಅನುಭವವಾಗುತ್ತದೆ. ಮಧು ಸುರಿಸಿದ ಈ ಮಧುರೈಯನ್ನೇ ರಾಜ ತನ್ನ ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಳ್ಳುತ್ತಾನೆ ಎನ್ನುತ್ತದೆ ಸ್ಥಳಪುರಾಣ.




೧೨ ನೇ ಶತಮಾನದ ಪಾಂಡ್ಯರಾಜ ಸದಯವರ್ಮ ಕುಲಶೇಖರನ ಆಳ್ವಿಕೆಯ ಕಾಲದಲ್ಲಿ ತಮಿಳುನಾಡಿನ ಮದುರೈ ನಗರದ ಮಧ್ಯಭಾಗದಲ್ಲಿ ವೈಗೈ ನದೀತೀರದಲ್ಲಿ ಸ್ಥಾಪಿಸಲ್ಪಟ್ಟದ್ದು ಈ ದೇವಿ ಮೀನಾಕ್ಷಿಯ ದಿವ್ಯ ಭವ್ಯ ದೇಗುಲ. ನಾಲ್ಕು ದಿಕ್ಕಿನಲ್ಲೂ ನಾಲ್ಕು ಸುಂದರ ಗೋಪುರಗಳನ್ನುಳ್ಳ ಈ ದೇವಾಲಯವು ಅದ್ಭುತ ಶಿಲ್ಪಕಲೆಗೆ ಸಾಕ್ಷಿಯಾಗಿದೆ. ಈ ದೇವಾಲಯದ ಚಿಕ್ಕ ದೊಡ್ಡ ಗೋಪುರಗಳ ಒಟ್ಟು ಸಂಖ್ಯೆ ೨೭. ದಕ್ಷಿಣದಿಕ್ಕಿನ ಗೋಪುರ ಅತ್ಯಂತ ದೊಡ್ಡದು. ಪಶ್ಚಿಮದ ಗೋಪುರ ಶಿಲ್ಪಕಲೆಯ ಪರಾಕಾಷ್ಠೆ ಎನ್ನಬಹುದು. ಈ ಗೋಪುರಗಳ ಶಿಲ್ಪಗಳು ವಿವಿಧ ಬಣ್ಣಗಳಿಂದ ಮತ್ತೂ ಸುಂದರವಾಗಿ ಗೋಚರಿಸುತ್ತದೆ.

ಗೋಪುರದೊಳಗೆ ಪ್ರವೇಶಿಸುತ್ತಿದ್ದಂತೆಯೇ ಫಲಪುಷ್ಪಗಳನ್ನು ಮಾರುವ ನಗರಮಂಟಪವಿದೆ. ಅಲ್ಲಿಂದ ಮುಂದೆ ಅಷ್ಟಶಕ್ತಿ ಮಂಟಪವನ್ನು ನೋಡಬಹುದು. ಈ ಮಂಟಪದಲ್ಲಿ ಅಷ್ಟಲಕ್ಷ್ಮಿಯರ ಸುಂದರ ವಿಗ್ರಹಗಳನ್ನೊಳಗೊಂಡ ಎಂಟು ಆಧಾರಸ್ತಂಭಗಳಿವೆ. ದ್ವಾರದ ಎಡಬಲಗಳಲ್ಲಿ ಗಣೇಶ ಹಾಗೂ ಸುಬ್ರಹ್ಮಣ್ಯನ ವಿಗ್ರಹಗಳಿವೆ. ಹೀಗೆಯೇ ಮುಂದೆ ಸಾಗುತ್ತಲೇ ಅತ್ಯಂತ ಪ್ರಮುಖವೂ ಸುಂದರವೂ ಆದ ಸ್ವರ್ಣಪುಷ್ಕರಣಿಯನ್ನು ಕಾಣುತ್ತೇವೆ. ಇದನ್ನು ಪೋತ್ತಾಮರೈ ಕುಳಂ ಎಂದು ಕರೆಯುತ್ತಾರೆ. ಈ ಸರೋವರದ ನಾಲ್ಕೂ ಕಡೆ ಇರುವ ಮಂಟಪಗಳ ಸುತ್ತಲಿನ ಗೋಡೆಗಳಮೇಲೆ ಭಗವಾನ್ ಶಂಕರನ ೬೪ ಲೀಲೆಗಳ ಸುಂದರ ವರ್ಣಚಿತ್ರಗಳಿವೆ.

ದೇವಾಲಯದ ಎದುರಿನ ಒಂದು ಮಂಟಪದ ಸ್ತಂಭಗಳಲ್ಲಿ ಒಂದೊಂದು ಕಂಬದಲ್ಲಿ ಒಬ್ಬೊಬ್ಬ ಪಾಂಡವನ ವಿಗ್ರಹವು ಕೆತ್ತಲ್ಪಟ್ಟಿದೆ. ಉಳಿದ ಏಳು ಸ್ತಂಭಗಳಲ್ಲಿ ಸಿಂಹಗಳ ಮೂರ್ತಿಯನ್ನು ಅದ್ಭುತವಾಗಿ ಕೆತ್ತಲಾಗಿದೆ. ಸಾವಿರಸ್ತಂಭಗಳ ಮಂಟಪದಲ್ಲಿ ಎರಡೂ ಬದಿಯಲ್ಲಿ ಯಾಳಿ (ಸಿಂಹದ ದೇಹ ಮತ್ತು ಆನೆಯ ತಲೆ ಇರುವ ಪ್ರಾಣಿ)ಯ ಸಾಲುವಿಗ್ರಹಗಳನ್ನು ನೋಡಲು ಎರಡು ಕಣ್ಣುಗಳು ಸಾಲದಾಗುತ್ತದೆ.

ಇಲ್ಲಿಂದ ಮುಂದೆ ಅನೇಕ ದ್ವಾರಗಳನ್ನು ದಾಟಿ ಹೋದಮೇಲೆ ದೇವಿ ಮೀನಾಕ್ಷಿಯ ಗರ್ಭಗೃಹದ ದರ್ಶನವಾಗುವುದು. ಬಹು ಅಮೂಲ್ಯ ವಸ್ತ್ರಾಭರಣಗಳಿಂದ ಅತ್ಯಂತ ಸುಂದರವಾಗಿ ಹಸಿರು ಬಣ್ಣದಲ್ಲಿ ಶೋಭಿಸುವ ಈ ಮೀನನೇತ್ರೆಯು ಕೈಯಲ್ಲಿ ಒಂದು ಸುಂದರ ಗಿಣಿಯನ್ನು ಹಿಡಿದಿರುತ್ತಾಳೆ. ಇಲ್ಲಿನ ಮಹಾಮಂಟಪದ ಬಲಭಾಗದಲ್ಲಿ ದೇವಿಯ ಶಯನಮಂದಿರವಿದೆ. ಈ ಗರ್ಭಗುಡಿಯ ಶಿಖರ ವರ್ಣರಂಜಿತವಾಗಿದೆ. ಈ ಗರ್ಭಗುಡಿಗೆ ಪ್ರದಕ್ಷಿಣೆ ಬರುವಾಗ ಅನೇಕ ಸುಂದರ ದೇವತಾಮೂರ್ತಿಗಳನ್ನು ಕಾಣುತ್ತೇವೆ. ಇವುಗಳಲ್ಲಿ ಜ್ಞಾನಶಕ್ತಿ, ಕ್ರಿಯಾಶಕ್ತಿ, ಬಲಶಕ್ತಿಯ ಮೂರ್ತಿಗಳು ಪ್ರಮುಖವಾದುದು.

ಮೀನಾಕ್ಷಿದೇವಿಯ ಗರ್ಭಗೃಹದಿಂದ ಹೊರಬಂದು ಶ್ರೀಸುಂದರೇಶ್ವರ ಸ್ವಾಮಿಯ ದರ್ಶನಕ್ಕೆ ಹೋಗುವ ಹಾದಿಯಲ್ಲಿ ವಂಡೀಪುರ ಸರೋವರವನ್ನು ನಿರ್ಮಿಸುವಾಗ ಭೂಮಿಯಲ್ಲಿ ದೊರೆತ ದೊಡ್ಡ ಗಣೇಶನ ವಿಗ್ರಹವನ್ನು ದರ್ಶಿಸಬಹುದು.

### ಶ್ರೀ ಸುಂದರೇಶ್ವರಸ್ವಾಮಿಯ ದೇಗುಲ

ದ್ವಾರದಲ್ಲಿರುವ ಸುಂದರ ದ್ವಾರಪಾಲಕರ ವಿಗ್ರಹಗಳನ್ನು ದರ್ಶಿಸಿ ಪ್ರಾಕಾರದೊಳಗೆ ಪ್ರವೇಶಿಸಿದಾಗ ಪಂಚಲೋಹನಿರ್ಮಿತ ದ್ವಾರದೇವತೆಗಳ ಪ್ರತಿಮೆಗಳು ಕಾಣಬರುತ್ತವೆ. ಇದರ ಸಮ್ಮುಖದಲ್ಲೇ ಬೆಳ್ಳಿಯ ಕವಚಗಳಿಂದಲಂಕೃತವಾದ ತಾಂಡವನೃತ್ಯ ಭಂಗಿಯ ನಟರಾಜ ಶಿವನ ದರ್ಶನವಾಗುತ್ತದೆ. ಚಿದಂಬರಕ್ಷೇತ್ರದ ನಟರಾಜ ತನ್ನ ವಾಮಪಾದವನ್ನು ಎತ್ತಿಹಿಡಿದಿದ್ದಾನೆ, ಇಲ್ಲಿಯ ನಟರಾಜ ತನ್ನ ದಕ್ಷಿಣಪಾದವನ್ನು ಮೇಲೆತ್ತಿ ನಿಂತಿರುವ ಮನೋಹರ ಭಂಗಿಯನ್ನು ಕಾಣಬಹುದು. ಇಲ್ಲಿಂದ ಮುಂದೆ ಒಳಹೊಕ್ಕಾಗ ಶ್ರೀಸುಂದರೇಶ್ವರ ಸ್ವಾಮಿಯ ಗರ್ಭಗುಡಿಯೆದುರು ಸ್ವರ್ಣಸ್ತಂಭವನ್ನೂ ಮೇಲೆ ಸುಂದರ ಗೋಪುರವನ್ನು ಕಾಣಬಹುದು. ಗರ್ಭಗುಡಿಯಲ್ಲಿ ಸ್ವರ್ಣತ್ರಿಪುಂಡ್ರಗಳಿಂದ ಶೋಭಿಸುವ ಸ್ವಯಂಭು ಶಿವಲಿಂಗವೇ ಶ್ರೀಸುಂದರೇಶ್ವರ ಸ್ವಾಮಿ.

ಗರ್ಭಗುಡಿಯ ಹೊರಾಂಗಣದಲ್ಲಿರುವ ಎಂಟು ಸ್ತಂಭಗಳಲ್ಲಿನ ಪರಶಿವನ ವಿವಿಧ ಲೀಲೆಗಳನ್ನು ಬಿಂಬಿಸುವ ಮೂರ್ತಿಗಳ ಶಿಲ್ಪನೈಪುಣ್ಯ, ಅವುಗಳು ಸಜೀವವೋ ಎಂಬಂತೆ ಗೋಚರಿಸುತ್ತವೆ. ಈ ಮಂಟಪದಲ್ಲಿ ಶಿಲೆಯಲ್ಲೇ ಕೆತ್ತಿರುವ ಅಲುಗಾಡುವ ಶೃಂಖಲೆಗಳು ಶಿಲ್ಪಕಲೆಯ ಒಂದು ಅದ್ಭುತ !

ಇಲ್ಲಿ ಶಿವಗಣಗಳ ಸಾಮರ್ಥ್ಯದ ಪ್ರತೀಕವೊ ಎಂಬಂತಿರುವ ವೀರಭದ್ರಸ್ವಾಮಿಯ ದೊಡ್ಡ ವಿಗ್ರಹವನ್ನೂ ಅಷ್ಟೇ ದೊಡ್ಡದಾದ ಕಾಳಿಯ ವಿಗ್ರಹವನ್ನೂ ಕಾಣುತ್ತೇವೆ. ಇಲ್ಲಿರುವ ಮತ್ತೊಂದು ಅದ್ಭುತ ಪರಶಿವನ ಕಲಾಪೂರ್ಣ ಊರ್ಧ್ವತಾಂಡವಮೂರ್ತಿ. ಇದರಲ್ಲಿ ಸ್ವಾಮಿಯ ಪಾದ ಅವನ ಕರ್ಣಗಳವರೆಗೂ ಮೇಲಕ್ಕೆತ್ತಲ್ಪಟ್ಟಿದೆ. ಇಲ್ಲಿ ಪ್ರದಕ್ಷಿಣೆ ಬರುವಾಗ ಅತ್ಯಂತ ಪ್ರಾಚೀನವಾದ ಕದಂಬ ವೃಕ್ಷದ ಅವಶೇಷವನ್ನು ಸಂರಕ್ಷಿಸಿರುವುದನ್ನು ಕಾಣುತ್ತೇವೆ. ಈ ಕದಂಬ ವೃಕ್ಷದಡಿಯಲ್ಲಿಯೇ ಶ್ರೀಸುಂದರೇಶ್ವರ ಸ್ವಾಮಿಯು ದೇವಿ ಮೀನಾಕ್ಷಿಯ ಪಾಣಿಗ್ರಹಣ ಮಾಡಿದರೆಂಬುದು ಆಸ್ತಿಕರ ನಂಬಿಕೆ. ಇದಲ್ಲದೆ ಇಲ್ಲಿನ ಮಂಟಪಗಳಲ್ಲಿ ಅನೇಕ ರಾಜಾರಾಣಿಯರ, ದೇವತೆಗಳ, ಕಣ್ಣಪ್ಪ ಮೊದಲಾದ ಶಿವಭಕ್ತರ ಮನುಷ್ಯಾಕಾರಕ್ಕೂ ದೊಡ್ಡದಾದ ಸುಂದರ ವಿಗ್ರಹಗಳಿವೆ. ಇವುಗಳಲ್ಲಿ ವೀಣಾಪಾಣಿ ಸರಸ್ವತಿದೇವಿಯ ವಿಗ್ರಹ ಅತ್ಯಂತ ಕಲಾಪೂರ್ಣವಾಗಿದೆ.

ಉತ್ಸವನಗರ ಎಂದೇ ಕರೆಯಲ್ಪಡುವ ಮಧುರೈ ನಗರದಲ್ಲಿ ಮೀನಾಕ್ಷಿದೇವಿಯ ದೇಗುಲದಲ್ಲಿ ಚಿತ್ತಿರೈ ಮೊದಲಾದ ಅನೇಕ ಉತ್ಸವಗಳು ಅತ್ಯಂತ ವೈಭವಪೂರ್ಣವಾಗಿ ನಡೆಯುತ್ತವೆ.

### ಮದುರೆಯಲ್ಲಿ ಶ್ರೀಮಾತೆ ಶಾರದಾದೇವಿ

ಶ್ರೀಮಾತೆ ಶಾರದಾದೇವಿಯವರು ತಮ್ಮ ದಕ್ಷಿಣಭಾರತದ ಪ್ರವಾಸದಲ್ಲಿ ಮದರಾಸಿನಿಂದ ಮದುರೆಗೆ ೧೧ನೇ ಮಾರ್ಚ್ ೧೯೧೧ ರಂದು ಆಗಮಿಸಿ ಮೀನಾಕ್ಷಿದೇವಿಯ ದರ್ಶನವನ್ನು ಪಡೆಯುತ್ತಾರೆ. ಶ್ರೀಮಾತೆ ಮತ್ತು ಅವರ ಸಂಗಡಿಗರು ದೇವಾಲಯದ ಆಗಿನ ಪದ್ಧತಿಯಂತೆ ಶಿವಗಂಗಾ ಸರೋವರದಲ್ಲಿ ಮಿಂದು ದೇವಿಯ ದರ್ಶನ ಮಾಡಿ ಸರೋವರದಲ್ಲಿ ದೀಪಗಳನ್ನು ಬೆಳಗುತ್ತಾರೆ. ಜಗನ್ಮಾತೆ ತನ್ನನ್ನೇ ತಾನು ಕಂಡು ಆನಂದಿಸುವ ಪರಿ ಇದಲ್ಲವೆ ?

ಮದುರೈ ಮೀನಾಕ್ಷಿಯ ದೇವಾಲಯದ ದರ್ಶನದನಂತರ ಶ್ರೀಮಾತೆಯವರು ಮದುರೈಯಲ್ಲಿರುವ ೧೨೫ ಸ್ತಂಭಗಳ ತಿರುಮಲನಾಯಕನ ಅರಮನೆಯನ್ನು ದರ್ಶಿಸಿ, ಅಲ್ಲಿಂದ ಮುಂದೆ ಬಂದು ತೆಪ್ಪಕುಳಂ ಎಂಬ ಸರೋವರವನ್ನೂ, ಆ ಸರೋವರದ ನಡುವೆ ಇದ್ದ ಸುಂದರ ಮಂಟಪವನ್ನು ದರ್ಶಿಸಿ ಆನಂದಿಸುತ್ತಾರೆ. ಇಂತಹ ವಿಶಾಲವೂ ಭವ್ಯವೂ ಆದ ದೇಗುಲಗಳನ್ನು ಕಂಡು ಶ್ರೀಮಾತೆ ಆಶ್ಚರ್ಯಚಕಿತರಾಗುತ್ತಾ, ''ಆಹಾ ! ಗುರುಮಹಾರಾಜರ ಲೀಲೆ ಅದ್ಭುತ'' ಎಂದು ಉದ್ಗರಿಸುತ್ತಾರೆ.


### ಮಧುರೆಯಲ್ಲಿ ಸ್ವಾಮಿ ಬ್ರಹ್ಮಾನಂದರು

ಸ್ವಾಮಿ ಬ್ರಹ್ಮಾನಂದರು ರಾಮೇಶ್ವರನಿಗೆ ಪೂಜೆ ಸಲ್ಲಿಸಿ, ಮದರಾಸಿಗೆ ಹಿಂದಿರುಗುವಾಗ ಮದುರೆ ಕ್ಷೇತ್ರಕ್ಕೆ ಹೋಗಿ ಅಲ್ಲಿನ ಪ್ರಖ್ಯಾತ ಮೀನಾಕ್ಷಿ ದೇವಿಯ ದರ್ಶನಕ್ಕಾಗಿ ಮೂರು ದಿನಗಳ ಕಾಲ ತಂಗುತ್ತಾರೆ. ಸ್ವಾಮಿ ರಾಮಕೃಷ್ಣಾನಂದರೊಡನೆ ದೇಗುಲಕ್ಕೆ ಹೋದಾಗ ಆಗಿನ ಸಂಪ್ರದಾಯದಂತೆ ಕ್ಷತ್ರಿಯಕುಲದಲ್ಲಿ ಹುಟ್ಟಿದ ಸ್ವಾಮಿ ಬ್ರಹ್ಮಾನಂದರಿಗೆ ಪ್ರವೇಶವಿರಲಿಲ್ಲ. ಆದರೆ ಸ್ವಾಮಿ ರಾಮಕೃಷ್ಣಾನಂದರು ಆಳ್ವಾರ್, ಆಳ್ವಾರ್ ಎಂದು ಕೂಗುತ್ತಾ ಒಳಗೆ ಪ್ರವೇಶಿಸಿದಾಗ ಪುರೋಹಿತರು ಅವರನ್ನು ತಡೆಯಲಿಲ್ಲ. ದೇವಿಯ ಸಮ್ಮುಖದಲ್ಲಿ ಸ್ವಾಮಿ ಬ್ರಹ್ಮಾನಂದರಿಗೆ ಅದ್ಭುತ ದರ್ಶನವಾಯಿತು. ತಾಯಿ ಮೀನಾಕ್ಷಿ ಮೇಲೆದ್ದು ಇವರ ಸಮೀಪ ಬಂದ ಅನುಭವವಾಗಿ ಬಾಹ್ಯಪ್ರಜ್ಞೆಯನ್ನು ಕಳೆದುಕೊಳ್ಳುತ್ತಾರೆ. ಸ್ವಾಮಿ ರಾಮಕೃಷ್ಣಾನಂದರು ಅವರನ್ನು ಒಂದು ಘಂಟೆಗಳ ಕಾಲ ಹಿಡಿದುಕೊಂಡೇ ಇದ್ದು ತಾವೂ ಆನಂದದಿಂದ ಕಣ್ಣೀರು ಸುರಿಸುತ್ತಾ ಜಗನ್ಮಾತೆಯ ಸ್ತೋತ್ರ ಮಾಡುತ್ತಾರೆ.

### ೬.ಶ್ರೀರಂಗನಾಥಸ್ವಾಮಿಯ ಮಹಾದೇಗುಲ, ಶ್ರೀರಂಗಂ

ವೈಕುಂಠದಲ್ಲಿ ಶ್ರೀಮನ್ನಾರಾಯಣನು ತನ್ನ ಸಾಕ್ಷಾತ್ ಶ್ರೀ ವಿಗ್ರಹವನ್ನು ಬ್ರಹ್ಮನಿಗೆ ಕರುಣಿಸಿದನಂತೆ. ವೈವಸ್ವತ ಮನುವಿನ ಪುತ್ರ ಇಕ್ಷ್ವಾಕು ಕಠೋರ ತಪಸ್ಸನ್ನಾಚರಿಸಿ ಬ್ರಹ್ಮನಿಂದ ಮಹಾವಿಷ್ಣುವಿನ ವಿಗ್ರಹವನ್ನು ವಿಮಾನಸಮೇತ ಪಡೆದಂದಿನಿಂದ ಶ್ರೀರಂಗನಾಥಸ್ವಾಮಿ ಅಯೋಧ್ಯೆಯ ಅರಸರ ಆರಾಧ್ಯದೈವವಾಗುತ್ತಾನೆ.

ರಾವಣವಧೆಯನಂತರ ಅಯೋಧ್ಯೆಗೆ ಮರಳಿದ ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಮಹೋತ್ಸವವು ಸಂಪನ್ನವಾಗುತ್ತಲೇ ತನಗೆ ಸಹಾಯ ಮಾಡಿದ ವಾನರವೀರರೆಲ್ಲರಿಗೂ ಅವರವರು



ಕೇಳಿದ ವರಗಳನ್ನು ಪ್ರಸಾದಿಸುತ್ತಾನೆ ಶ್ರೀರಾಮ. ವಿಭೀಷಣನು ತನಗೆ ಶ್ರೀರಂಗನಾಥನ ವಿಗ್ರಹವನ್ನು ಕರುಣಿಸಬೇಕೆಂದು ಯಾಚಿಸಿದಾಗ ಉದಾರಚರಿತನಾದ ಶ್ರೀರಾಮ ವಿಮಾನಸಮೇತ ರಂಗನಾಥನನ್ನು ವಿಭೀಷಣನಿಗೆ ಕೊಟ್ಟು ಅನುಗ್ರಹಿಸುತ್ತಾನೆ. ಇದನ್ನು ಕಂಡ ದೇವತೆಗಳು ಶ್ರೀರಂಗನಾಥನು ಲಂಕೆಯವರೆಗೆ ಹೋಗದಂತೆ ತಡೆಯಲು, ವಿಭೀಷಣನು ಸಂಧ್ಯಾಕರ್ಮಕ್ಕಾಗಿ ಕಾವೇರಿ ನದಿಯ ತೀರದಲ್ಲಿ ದೇಗುಲವನ್ನು ಇಳಿಸಿದಾಗ ದೇವತೆಗಳು ಅದು ಅಲ್ಲಿಂದ ಚಲಿಸಲಾಗದಂತೆ ಪ್ರತಿಷ್ಠಾಪಿಸಿಬಿಡುತ್ತಾರೆ. ಹೀಗೆ ಸಿದ್ಧವಾದ ಕ್ಷೇತ್ರವೇ ಶ್ರೀರಂಗಕ್ಷೇತ್ರ.

ಹೀಗೆ ಅನೇಕ ಸ್ಥಳಪುರಾಣಗಳನ್ನು ಹೊಂದಿರುವ ತಿರುಚಿರಾಪಲ್ಲಿ ಜಿಲ್ಲೆಯ ಸುಪ್ರಸಿದ್ಧ ತೀರ್ಥಕ್ಷೇತ್ರ ಶ್ರೀರಂಗಮ್. ಇದು ಕಾವೇರಿ ನದಿಯ ಎರಡು ಧಾರೆಗಳ ನಡುವೆ ಕಂಗೊಳಿಸುತ್ತಿರುವ ದಿವ್ಯಕ್ಷೇತ್ರ. ಶ್ರೀ ರಂಗನಾಥನ ದೇವಾಲಯ ಅತ್ಯಂತ ವಿಶಾಲವಾಗಿ ಏಳು ಪ್ರಾಕಾರಗಳನ್ನು ಹೊಂದಿದೆ. ಮಧ್ಯಭಾಗದ ನಾಲ್ಕನೇ ಪ್ರಾಕಾರದಲ್ಲಿ ೯೬೦ ಸ್ತಂಭಗಳನ್ನು ಹೊಂದಿರುವ ಸಹಸ್ರಸ್ತಂಭ ಮಂಟಪವಿದೆ. ಮತ್ತೊಂದು ಮಂಟಪದಲ್ಲಿ ಕುದುರೆ, ಕುದುರೆ ಸವಾರರು ಮುಂತಾದ ಸುಂದರ ಶಿಲ್ಪಗಳನ್ನುಳ್ಳ ಸ್ತಂಭಗಳಿವೆ. ಐದನೆಯ ಪ್ರಾಕಾರದಲ್ಲಿ ದೊಡ್ಡ ಗರುಡನ ಮೂರ್ತಿಯುಳ್ಳ ಗರುಡ ಮಂಟಪವಿದೆ. ಇಲ್ಲಿಂದ ಸ್ವಲ್ಪ ಉತ್ತರಕ್ಕೆ ಸ್ವರ್ಣಮಂಡಿತ ಗರುಡ ಸ್ತಂಭವನ್ನು ಕಾಣಬಹುದು. ಇದರ ಈಶಾನ್ಯಭಾಗದಲ್ಲಿರುವ ಗೋಲಾಕಾರದ ಸರೋವರವೇ ಚಂದ್ರಪುಷ್ಕರಿಣಿ. ಭಕ್ತರು ಇಲ್ಲಿ ಮಿಂದು ಪುನೀತರಾಗುತ್ತಾರೆ. ಇದರ ಸಮೀಪದಲ್ಲಿ ಶ್ರೀರಂಗನಾಯಕಿ ಎಂದು ಪೂಜಿಸಲ್ಪಡುವ ಮಹಾಲಕ್ಷ್ಮಿಯ ವಿಶಾಲ ಮಂದಿರವಿದೆ. ಇಲ್ಲಿ ಕಲ್ಪವೃಕ್ಷ, ಶ್ರೀರಾಮ, ವೈಕುಂಠನಾಥ ಭಗವಾನರ ಸುಂದರ ವಿಗ್ರಹಗಳನ್ನು ಕಾಣಬಹುದು. ಶ್ರೀರಂಗನಾಯಕಿಯ ದೇಗುಲದ ಎದುರು ತಮಿಳುಭಾಷೆಯ ಪ್ರಸಿದ್ಧ ಕವಿ ಕಂಬರ್ ತಮ್ಮ ಕಂಬ ರಾಮಾಯಣವನ್ನು ಭಕ್ತರಿಗೆ ವಾಚನ ಮಾಡಿ ಹೇಳುತ್ತಿದ್ದ ಕಂಬರ್ ಮಂಟಪವಿದೆ.

ಆರನೆಯ ಪ್ರಾಕಾರವನ್ನು ದಾಟಿ ಏಳನೆಯ ಪ್ರಾಕಾರಕ್ಕೆ ಬಂದು ದಕ್ಷಿಣ ದ್ವಾರವನ್ನು ಪ್ರವೇಶಿಸಿದಾಗ ಶ್ರೀರಂಗನಾಥನ ಗರ್ಭಗುಡಿಯನ್ನು ಕಾಣುತ್ತೇವೆ. ೨೧ ಅಡಿ ಉದ್ದದ ಶೇಷಶಯನ ಮೂರ್ತಿ ಚತುರ್ಭುಜಗಳಿಂದ ಕೂಡಿದೆ. ಪಾದದ ಬಳಿ ಭೂದೇವಿ

ಮತ್ತು ನೀಳಾದೇವಿಯರು ಸ್ವಾಮಿಯ ಚರಣಸೇವೆ ಮಾಡುತ್ತಿದ್ದಾರೆ. ಗರ್ಭಗುಡಿ ವಿಶಾಲವೂ ಸುಂದರವೂ ಆಗಿದೆ. ಐದು ಹೆಡೆಯ ಶೇಷನು ಸ್ವಾಮಿಯ ಶಿರಸ್ಸಿನ ಮೇಲೆ ಛತ್ರವಾಗಿ ನಿಂತು ಸೇವೆ ಮಾಡುತ್ತಿದ್ದಾನೆ. ಬಹು ಅಮೂಲ್ಯ ವಸ್ತ್ರಾಭರಣಗಳಿಂದ ಅಲಂಕೃತನಾಗಿರುವ ಶೇಷಶಾಯಿ ಶ್ರೀರಂಗನ ದಿವ್ಯಮಂಗಳ ವಿಗ್ರಹವನ್ನು ಒಮ್ಮೆ ನೋಡಿದರೂ ಮನಸ್ಸಿನ ಮೇಲೆ ಅಚ್ಚೊತ್ತಿ ಬಿಡುತ್ತದೆ. ನೋಡುಗರ ಕಂಗಳೂ, ಹೃದಯಗಳೂ ತುಂಬಿಬರುತ್ತವೆ. ಶ್ರೀರಂಗನ ಮುಖಮಂಡಲವಂತೂ ಅತ್ಯಂತ ಚೇತೋಹಾರಿ. ಶ್ರೀರಂಗನ ಸುಂದರ ಕಣ್ಣುಗಳು ಕರುಣೆಯಿಂದ ಭಕ್ತರನ್ನು ಉದ್ಧರಿಸುತ್ತಿವೆ. ಯಾತ್ರಿಕರು ಇಂತಹ ಸ್ವಾಮಿಯನ್ನು, 'ಕಾವೇರಿ ರಂಗನನ್ನು ನೋಡದ ಕಂಗಳಿವ್ಯಾತಕೋ' ಎಂದು ಉದ್ಗರಿಸುತ್ತಾರೆ. ಈ ರಂಗನಾಥನ ಸಮೀಪ ಮಹಾಲಕ್ಷ್ಮಿ ಹಾಗೂ ವಿಭೀಷಣರು ಕುಳಿತಿರುವ ವಿಗ್ರಹಗಳಿವೆ.

ದೇವಾಲಯದ ಭಿತ್ತಿಗಳ ಮೇಲೆ ೩೦೦ ವರ್ಷದಷ್ಟು ಹಿಂದೆ ಬಿಡಿಸಿದ ಚಿತ್ರಗಳಲ್ಲಿ ಶ್ರೀವೈಷ್ಣವರು ಹೇಳುವ ೧೦೮ ದಿವ್ಯದೇಶಗಳನ್ನು ಕಾಣಬಹುದು. ನಾಲ್ಕನೆಯ ಪ್ರಾಕಾರದಲ್ಲಿ ೨೧೨ ಕಂಬಗಳ ಗರುಡಮಂಟಪವಿದೆ.

ಶ್ರೀ ಶಂಕರಭಗವತ್ಪಾದರು ಈ ಕ್ಷೇತ್ರದಲ್ಲಿ ಜನಾಕರ್ಷಕ ಯಂತ್ರವನ್ನು ಸ್ಥಾಪಿಸಿದ ಬಳಿಕ ಈ ದೇವಾಲಯವು ಇನ್ನೂ ಹೆಚ್ಚು ಹೆಚ್ಚು ಯಾತ್ರಿಕರನ್ನು, ಭಕ್ತರನ್ನು, ಮಹಾತ್ಮರನ್ನು ಆಕರ್ಷಿಸುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಪೌಷ ಶುಕ್ಲ ಪ್ರತಿಪದೆಯಿಂದ ಏಕಾದಶಿಯವರೆಗೆ ಈ ಶ್ರೀರಂಗ ಕ್ಷೇತ್ರದಲ್ಲಿ ಬಹು ದೊಡ್ಡ ಉತ್ಸವವು ನಡೆಯುತ್ತದೆ. ಏಕಾದಶಿಯಂದು ದೇಗುಲದ ವೈಕುಂಠದ್ವಾರವು ತೆರೆಯಲ್ಪಟ್ಟು ಅಲ್ಲಿಂದ ಹೊರಡುವ ಉತ್ಸವಮೂರ್ತಿಯನ್ನು ಆಸ್ತಿಕ ಜನರು ಭಕ್ತಿಯಿಂದ ಹಿಂಬಾಲಿಸಿ ಹೋಗಿ ಕೃತಕೃತ್ಯರಾಗುತ್ತಾರೆ. ಜೀವನದಲ್ಲಿ ಒಮ್ಮೆಯಾದರೂ ದರ್ಶಿಸಲೇಬೇಕಾದ ದಿವ್ಯಕ್ಷೇತ್ರ ಶ್ರೀರಂಗಂ.

### ೭. ಶ್ರೀ ಬೃಹದೀಶ್ವರ ದೇವಾಲಯ, ತಂಜಾವೂರು

ಚೋಳವಂಶದ ಅರಸ ರಾಜರಾಜೇಂದ್ರಚೋಳನ ಸ್ವಪ್ನದಲ್ಲಿ ಪರಮಶಿವ ಕಾಣಿಸಿಕೊಂಡು "ನರ್ಮದೆಯಲ್ಲಿ ನನ್ನ ಬೃಹದಾಕಾರದ ಶಿವಲಿಂಗವಿದೆ. ಅದನ್ನು ತಂದು ಇಲ್ಲಿ ಸ್ಥಾಪಿಸಿ ದೇಗುಲವನ್ನು ನಿರ್ಮಿಸು" ಎಂದು ಆದೇಶವಿತ್ತ. ಶಿವನ ಈ ಆದೇಶಾನುಸಾರ ಚೋಳರಾಜ ಆ ಬೃಹತ್ ಶಿವಲಿಂಗವನ್ನು ತಂದು ಅದಕ್ಕೆ ಒಂದು ಬೃಹತ್ತಾದ ದೇವಾಲಯವನ್ನೇ ಕಟ್ಟಿಸಿದ. ಚೋಳರಾಜನಿಗೆ ನಂದೀಶ್ವರನ ಬಗ್ಗೆಯೂ ಶಿವನ ಆದೇಶ ದೊರೆಯಲು ೪೦೦ ಮೈಲಿಗಳ ದೂರದಿಂದ ತಂದ ಮಹಾನಂದಿಯ ವಿಗ್ರಹವನ್ನು ಬೃಹದೀಶ್ವರನ ಎದುರು ಸ್ಥಾಪಿಸಲಾಯಿತು. ಇದು ಚಾರಿತ್ರಿಕ ಸತ್ಯ. ಅದ್ಭುತ !

ಯುನೆಸ್ಕೊ ವಿಶ್ವ ಹೆರಿಟೇಜ್ ಸೈಟ್‌ನಲ್ಲಿ ಸೇರ್ಪಡೆಯಾಗಿರುವ ಈ ವಿಶ್ವವಿಖ್ಯಾತ ದೇವಾಲಯ ಹೆಸರೇ ಹೇಳುವಂತೆ ತಂಜಾವೂರಿನ ಬೃಹತ್ ದೇಗುಲ ಈ ಬೃಹದೀಶ್ವರ ದೇವಾಲಯ. ೯೮೫-೧೦೧೫ನೇ ಇಸವಿಯವರೆಗೆ ಆಳಿದ ರಾಜರಾಜಚೋಳನ ಸಮಯದಲ್ಲಿ ಸುಮಾರು ೧೨ ವರ್ಷಗಳ ಅವಧಿಯಲ್ಲಿ ಈ ದೇಗುಲ ಕಟ್ಟಲ್ಪಟ್ಟಿತು. ಎತ್ತರವಾದ ಕೋಟೆಗೋಡೆಯೊಳಗೆ ವಿಶಾಲವಾದ ಪ್ರಾಂಗಣದಲ್ಲಿ ಈ ದೇಗುಲದ ನಿರ್ಮಾಣವಾಗಿದೆ. ಮೂಲದೇವರ ಗುಡಿಯ ಎದುರಿಗಿರುವ ಸುಂದರವಾದ ಬೃಹತ್ ಮಂಟಪದಲ್ಲಿ ೧೬ ಅಡಿ ಉದ್ದ, ೧೩ ಅಡಿ ಎತ್ತರ ಹಾಗೂ ೭ ಅಡಿ ದಪ್ಪವಿರುವ, ಏಕಶಿಲಾನಿರ್ಮಿತ, ಸುಂದರ ಶಿಲ್ಪಕಲೆಯ ಶ್ರೀ ನಂದೀಶ್ವರ ವಿಗ್ರಹ ಬಹು ಭವ್ಯವಾಗಿದೆ. ಇದು ೭೦೦ ಮಣ ತೂಕದ ಶಿಲೆ ಎಂದು ಹೇಳುತ್ತಾರೆ. ಇದು ಭಾರತದಲ್ಲಿನ ಬಹುದೊಡ್ಡ ನಂದಿ ವಿಗ್ರಹಗಳಲ್ಲಿ ಎರಡನೆಯ ಸ್ಥಾನ ಪಡೆದ ನಂದಿವಿಗ್ರಹವಾಗಿದೆ. ಮೊದಲನೆಯ ಸ್ಥಾನ ಲೇಪಾಕ್ಷಿಯ ಮಹಾನಂದಿಯದು.

ನಂದೀಶ್ವರನ ದರ್ಶನ ಮಾಡಿ ಈ ಮಂಟಪದ ಎದುರು ಎತ್ತರದಲ್ಲಿ ಕಟ್ಟಲ್ಪಟ್ಟ ಶಿವಾಲಯವನ್ನು ಹಲವು ಮೆಟ್ಟಲುಗಳನ್ನು ಹತ್ತಿ ತಲುಪಬೇಕು. ಮಹಾಮಂಟಪ ಮತ್ತು ಮುಖಮಂಟಪವನ್ನು ದಾಟಿ ಮುಂದೆ ಸಾಗುತ್ತಿದ್ದಂತೆ ಎದುರಿಗಿರುವ ಬೃಹದೀಶ್ವರನ ಗರ್ಭಗೃಹದಲ್ಲಿ ೨೯ ಅಡಿ ಎತ್ತರವಿರುವ ಬೃಹತ್ ಶಿವಲಿಂಗ



ದೂರದಿಂದಲೇ ಕಾಣುತ್ತದೆ. ಈ ಸ್ವಾಮಿಗೆ ಅಭಿಷೇಕ ಅರ್ಚನಾದಿಗಳನ್ನು ಮಾಡಲು ಶಿವಲಿಂಗದ ಸುತ್ತಲೂ ಮೆಟ್ಟಲುಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಲ್ಲಿ ನಡೆಯುವ ಬೃಹತ್ ಪೂಜೆಯನ್ನು ನೋಡಲು ಪಾಮರರಾದ ನಮಗೆ ಎರಡು ಕಣ್ಣುಗಳು ಸಾಲದೆನಿಸುತ್ತದೆ. ಈ ಪರಶಿವನ ದರ್ಶನ ಮಾಡುತ್ತಿದ್ದರೆ ಆ ಪರಮ ದೈವವನ್ನು ಕೊಂಡಾಡುವ 'ಮಹತೋ ಮಹೀಯಾನ್' ಎಂಬ ಸ್ತುತಿ ತಾನೇತಾನಾಗಿ ನಮ್ಮಿಂದ ಹೊರಹೊಮ್ಮುತ್ತದೆ. ಈ ಗರ್ಭಗುಡಿಯ ವಿಮಾನ ಗೋಪುರವು ವರ್ಣನಾತೀತವಾಗಿದೆ. ಇದರ ಎತ್ತರ ೨೦೦ ಅಡಿ. ಇದರ ತುದಿಯಲ್ಲಿ ೨೨೦೦ ಮಣ ತೂಕದ ಏಕಶಿಲೆಯ ಅದ್ಭುತ ಶಿಲ್ಪವಿನ್ಯಾಸವಿದ್ದು ಅದರ ಮೇಲೆ ಸ್ವರ್ಣಕಲಶವನ್ನು ಕಾಣುತ್ತೇವೆ. ಈ ಏಕಶಿಲೆಯನ್ನು ಅಷ್ಟು ಎತ್ತರದಲ್ಲಿ, ಆಧುನಿಕ ಯಂತ್ರದ ಸಹಾಯವಿಲ್ಲದ ಆ ಕಾಲದಲ್ಲಿ , ಹೇಗೆ ಹತ್ತಿಸಿದರೆಂಬುದೇ ಅಚ್ಚರಿಯ ಸಂಗತಿ ! ಸಮೀಪದಲ್ಲೆಲ್ಲೂ ಸಿಗದ ಈ ಶಿಲೆಯನ್ನು ಬಹು

ದೂರದಿಂದ ಇಲ್ಲಿಯವರೆಗೆ ಹೇಗೆ ಸಾಗಿಸಿದ್ದಾರೆ ಎಂಬುದು ದೇಶ ವಿದೇಶದ ಜನರಿಗೆ ಉತ್ತರ ಸಿಗದ ಪ್ರಶ್ನೆಯಾಗಿದೆ. ಇದೊಂದು ಅದ್ಭುತ!

ದೇವಾಲಯದ ಮೊಗಸಾಲೆಯ (ಕಾರಿಡಾರ್) ಭಿತ್ತಿಗಳಲ್ಲಿ ಒಟ್ಟು ೮೧ ಭರತನಾಟ್ಯದ ವಿವಿಧ ಭಂಗಿಗಳ ಸುಂದರ ಶಿಲ್ಪಗಳಿವೆ. ಇನ್ನುಳಿದ ೨೭ ಶಿಲ್ಪಗಳು ಕಾಣಸಿಗುತ್ತಿಲ್ಲ. ೧೧ ನೇ ಶತಮಾನದಲ್ಲಿ ಭರತನಾಟ್ಯ ಕಲೆಗೆ ಇದ್ದ ಪ್ರಾಮುಖ್ಯತೆಯನ್ನು ಇದು ಬಿಂಬಿಸುವುದು. ಇವಲ್ಲದೇ ದೇಗುಲದ ಭಿತ್ತಿಗಳಲ್ಲೂ ಗೋಪುರಗಳಲ್ಲೂ ಅನೇಕ ಸುಂದರ ಶಿಲ್ಪಗಳನ್ನು ಕಾಣಬಹುದು.

ಬೃಹದೀಶ್ವರ ದೇವಾಲಯದಲ್ಲಿ ಎಲ್ಲವೂ ಬೃಹತ್! ಕೋಟೆಯ ಎತ್ತರ ಗೋಡೆ, ಪ್ರಾಂಗಣ, ನಂದಿ ಮಂಟಪ, ನಂದಿವಿಗ್ರಹ, ಗರ್ಭಗುಡಿ, ಶಿವಲಿಂಗ, ಇವುಗಳಿಗನುಗುಣವಾದ ಎತ್ತರದ ಮೇಲ್‌ಛಾವಣಿ, ವಿಮಾನ ಗೋಪುರ, ತುದಿಯಲ್ಲಿರುವ ಏಕಶಿಲಾ ಶಿಲ್ಪವಿನ್ಯಾಸ ಹೀಗೆ ಎಲ್ಲವೂ ಬೃಹತ್!

ಈ ಶಿವಾಲಯದಲ್ಲಿ ಗಣೇಶ, ಸುಬ್ರಹ್ಮಣ್ಯರಿಗೆ ಪ್ರತ್ಯೇಕವಾದ ಸುಂದರ ಮಂದಿರಗಳಿವೆ. ನಂದಿಮಂಟಪದ ಉತ್ತರ ಭಾಗದಲ್ಲಿ ಬೃಹನ್ನಾಯಕಿ ಎಂದು ಕರೆಯಲ್ಪಡುವ ದೇವಿ ಪಾರ್ವತಿಯ ವಿಶಾಲವೂ, ಭವ್ಯವೂ ಆದ ದೇಗುಲವಿದೆ. ಶಿವಾಲಯಕ್ಕೆ ಪ್ರದಕ್ಷಿಣೆ ಬರುವಾಗ ೨೫೨ ಸಾಲುಲಿಂಗಗಳನ್ನು ದರ್ಶಿಸಬಹುದು.

### ಸರಸ್ವತಿ ಮಹಲ್ ಗ್ರಂಥಾಲಯ

ತಂಜಾವೂರಿನ ದೊಡ್ಡಕೋಟೆಯಲ್ಲಿ, ತಂಜಾವೂರ್ ಅರಮನೆಯ ಆವರಣದಲ್ಲಿರುವ ಮತ್ತೊಂದು ಅತಿಮುಖ್ಯವಾದ ಪ್ರೇಕ್ಷಣೀಯ ಸ್ಥಳವೇ ಮಹಾರಾಜ ಸರ್ಫೋಜಿಯವರ ಸರಸ್ವತಿ ಮಹಲ್ ಗ್ರಂಥಾಲಯ. ಇದು ಏಷಿಯಾ ಖಂಡದಲ್ಲೇ ಅತ್ಯಂತ ಪ್ರಾಚೀನ ಗ್ರಂಥಾಲಯ. ಇಲ್ಲಿ ಸಂಸ್ಕೃತ ಭಂಡಾರವೇ ಇದೆ. ೨೫,೦೦೦ ಕ್ಕೂ ಮೇಲ್ಪಟ್ಟು ಚಿಕ್ಕ ದೊಡ್ಡ ತಾಳೆಗರಿ ಗ್ರಂಥಗಳು, ಹಸ್ತಲಿಖಿತಪ್ರತಿಗಳು ಹಾಗೂ ೬೦,೦೦೦ ಕ್ಕೂ ಮೇಲ್ಪಟ್ಟು ತಮಿಳು, ಮರಾಠಿ, ಸಂಸ್ಕೃತ ಮತ್ತು ತೆಲುಗು ಭಾಷೆಗಳ ಅತ್ಯಂತ ಅಪರೂಪದ ಗ್ರಂಥಗಳ ಸಂಗ್ರಹವು ಈ ಸಾಹಿತ್ಯ ಶಾರದೆಯ ಭವನದಲ್ಲಿದೆ. ಇದಕ್ಕೆ ಸೇರಿದಂತೆ ಒಂದು ವಸ್ತುಸಂಗ್ರಹಾಲಯವೂ ಇದೆ. ಇದರಲ್ಲಿ ತಂಜಾವೂರ್ ಚಿತ್ರಕಲೆಯ ದೊಡ್ಡ ದೊಡ್ಡ ಚಿತ್ರಗಳ ಸಂಗ್ರಹವಿದೆ.

## ೮. ರಾಮನಾಥಪುರದ ಶ್ರೀರಾಮೇಶ್ವರ ಕ್ಷೇತ್ರ

ಭಾರತದ ನಾಲ್ಕು ದಿಕ್ಕುಗಳಲ್ಲಿ ಗುರುತಿಸಲ್ಪಟ್ಟಿರುವ ಚಾರ್‌ಧಾಮ್ ಕ್ಷೇತ್ರಗಳಲ್ಲಿ , ದಕ್ಷಿಣಕಾಶಿ ಎಂದೇ ಪ್ರಖ್ಯಾತವಾಗಿರುವ ಹಾಗೂ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಶ್ರೀರಾಮೇಶ್ವರ ಕ್ಷೇತ್ರವು ದಕ್ಷಿಣಭಾರತದ ತಮಿಳುನಾಡಿನ ದಕ್ಷಿಣಭಾಗದ ಒಂದು ದ್ವೀಪದಲ್ಲಿ ವಿರಾಜಿಸುತ್ತಿದೆ. ತ್ರೇತಾಯುಗದಲ್ಲಿ ಸಾಕ್ಷಾತ್ ಶ್ರೀರಾಮನಿಂದಲೇ ಸ್ಥಾಪಿಸಲ್ಪಟ್ಟುದರಿಂದ ಇದು ಶ್ರೀರಾಮೇಶ್ವರಲಿಂಗ.

ಈ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳು ಮೊದಲು ರಾಮತೀರ್ಥ, ಸೀತಾತೀರ್ಥ, ಲಕ್ಷ್ಮಣತೀರ್ಥ ಮತ್ತು ಅಗ್ನಿತೀರ್ಥಗಳಲ್ಲಿ ಮಿಂದು ದೇವಾಲಯಕ್ಕೆ ಹೊರಡುತ್ತಾರೆ. ಅಗ್ನಿತೀರ್ಥವಾದರೋ ದೇವಾಲಯದ ಪೂರ್ವದ್ವಾರದೆದುರು ಸಮುದ್ರಕ್ಕೆ ಸೇರಿದಂತೆಯೇ ಇದೆ. ಸೀತಾದೇವಿಯು ಅಗ್ನಿಪ್ರವೇಶ ಮಾಡಿ ತನ್ನ ಪಾವಿತ್ರ್ಯವನ್ನು ನಿರೂಪಿಸಿದುದು ಈ ತೀರ್ಥದ ಬಳಿಯೇ ಎನ್ನುತ್ತದೆ ಸ್ಥಳಪುರಾಣ. ಹಾಗಾಗಿ ಅಗ್ನಿತೀರ್ಥ ಸ್ನಾನ ಅತ್ಯಂತ ಪವಿತ್ರ.

ಈ ದೇಗುಲದ ಪೂರ್ವ ಮತ್ತು ಪಶ್ಚಿಮ ದ್ವಾರಗಳಲ್ಲಿ ಸುಂದರವಾದ ಗೋಪುರಗಳಿವೆ. ಈ ಕ್ಷೇತ್ರದಲ್ಲಿ ಒಟ್ಟು ೫೧ ತೀರ್ಥಗಳಿವೆ. ದೇವಾಲಯದ ಒಳಭಾಗದಲ್ಲಿರುವ ೨೨ ಕೂಪತೀರ್ಥಗಳಲ್ಲಿ ಸ್ನಾನ ಮಾಡುತ್ತಾ ಮುಂದುವರಿಯಬೇಕು. ಇಲ್ಲಿನ ಕೂಪಗಳಿಗೆ ನಲ, ನೀಲ, ಗವಯ, ಗವಾಕ್ಷ, ಗಂಧಮಾದನ, ಮಾಧವ ಮುಂತಾದ ನಾಮಧೇಯಗಳಿವೆ. ಇವೆಲ್ಲವೂ ಹೊರಗಿನ ಪ್ರಾಕಾರದ ಹಾದಿಯಲ್ಲಿವೆ.

ಈ ದೇವಾಲಯದ ಹೊರಗಿನ ಪ್ರಾಕಾರ ವಿಶ್ವದಲ್ಲೇ ಅತಿ ದೊಡ್ಡದು. ಇದರಲ್ಲಿ ಸುಮಾರು ೧೨೧೨ ಸ್ತಂಭಗಳಿವೆ. ಇದರ ಉದ್ದ ಪೂರ್ವ-ಪಶ್ಚಿಮಕ್ಕೆ ೪೦೦ ಅಡಿಗಳು, ಉತ್ತರ-ದಕ್ಷಿಣಕ್ಕೆ ೬೪೦ ಅಡಿಗಳಿದ್ದು, ಎತ್ತರ ೬.೯ ಮೀಟರುಗಳಿವೆ.

ಶಂಖತೀರ್ಥ ಹಾಗೂ ಚಕ್ರತೀರ್ಥದ ನಡುವೆ ಇರುವ ಹಾದಿಯಲ್ಲಿ ಮುಂದೆ ಸಾಗಿದರೆ ರಾಮೇಶ್ವರ ಲಿಂಗದ ಗರ್ಭಗುಡಿಯ ದರ್ಶನವಾಗುವುದು. ಗರ್ಭಗುಡಿಯ ಎದುರು ಸ್ವರ್ಣಮಂಡಿತ ಸ್ತಂಭವಿದೆ. ಇದರ ಸಮೀಪವೇ ದೊಡ್ಡ ನಂದಿಯ ಮೃಣ್ಮಯ ವಿಗ್ರಹವಿದೆ. ಮೂರು ದ್ವಾರಗಳನ್ನು ದಾಟಿ ಒಳಹೊಕ್ಕರೆ ರಾಮೇಶ್ವರ ಜ್ಯೋತಿರ್ಲಿಂಗದ ದರ್ಶನ ಮಾಡುತ್ತೇವೆ. ಇದರ ಮೇಲೆ ಹೆಡೆಗಳನ್ನು ಬಿಚ್ಚಿದ ಸರ್ಪದ ಛತ್ರವಿದೆ.

ಶ್ರೀರಾಮ ಅಗಸ್ತ್ಯಋಷಿಗಳ ಆದೇಶಾನುಸಾರ ರಾವಣವಧೆಯ ಹತ್ಯಾದೋಷನಿವಾರಣೆಗಾಗಿ ರಾಮೇಶ್ವರದಲ್ಲಿ ಶಿವಲಿಂಗವನ್ನು ಪ್ರತಿಷ್ಠೆ ಮಾಡುವ ಸಂಕಲ್ಪ ಮಾಡಿ, ಕೈಲಾಸದಿಂದ ಶಿವಲಿಂಗವನ್ನು ತರಲು ಹನುಮಂತನನ್ನು ಕಳುಹಿಸುತ್ತಾನೆ. ಆದರೆ ಹನುಮಂತನು ಬರುವುದು ತಡವಾಗಿ ಮುಹೂರ್ತ ಮೀರಿದುದರಿಂದ ಸೀತೆಯು ಮರಳಿನಿಂದ ಮಾಡಿದ ಶಿವಲಿಂಗವನ್ನು ಶ್ರೀರಾಮನು ಪ್ರತಿಷ್ಠಾಪನೆ ಮಾಡಿಬಿಡುತ್ತಾನೆ. ಕೈಲಾಸದಲ್ಲಿ ಶಿವನ ದರ್ಶನ ಸ್ವಲ್ಪ ತಡವಾದುದರಿಂದ ಹನುಮಂತನು ಬಂದಾಗ ಮುಹೂರ್ತ ಮೀರಿರುತ್ತದೆ. ಆದರೂ ತನ್ನ ಪರಮಭಕ್ತ ಆಂಜನೇಯನು ಬೇಸರಿಸಬಾರದೆಂದು ಹಾಗೂ ಶಿವಲಿಂಗವನ್ನು ಕೈಲಾಸದಿಂದ ತಂದುದರಿಂದಲೂ ಶ್ರೀರಾಮನು ಕೈಲಾಸಲಿಂಗವನ್ನೂ ಪ್ರತಿಷ್ಠಾಪನೆಮಾಡಿ ಭಕ್ತರು ರಾಮೇಶ್ವರ ಲಿಂಗವನ್ನು ದರ್ಶಿಸುವ ಮೊದಲು ಈ ಕೈಲಾಸಲಿಂಗವನ್ನು ದರ್ಶಿಸಬೇಕೆಂದು ಆದೇಶ ವೀಯುತ್ತಾನೆ. ಈ ಕೈಲಾಸಲಿಂಗವೇ ಹನುಮದೇಶ್ವರ ಅಥವಾ ಶ್ರೀವಿಶ್ವನಾಥಲಿಂಗ. ಹೀಗಾಗಿ ರಾಮೇಶ್ವರದಲ್ಲಿ ಎರಡು ಮೂಲ ಶಿವಲಿಂಗಗಳ ದರ್ಶನವಾಗುತ್ತದೆ. ಮುಂದೆ ಬಲರಾಮನೂ, ಪಂಚಪಾಂಡವರೂ ಈ ಕ್ಷೇತ್ರದರ್ಶನ ಮಾಡುತ್ತಾರೆ. ಅಗಸ್ತ್ಯ ಮಹರ್ಷಿಗಳ ಆಶ್ರಮವೂ ಇಲ್ಲಿತ್ತು ಎನ್ನುತ್ತದೆ ಸ್ಥಳಪುರಾಣ.

ಶ್ರೀರಾಮೇಶ್ವರ ಜ್ಯೋತಿರ್ಲಿಂಗವಲ್ಲದೆ ಅಗಸ್ತ್ಯಮಹರ್ಷಿಗಳಿಂದ ಸ್ಥಾಪಿಸಲ್ಪಟ್ಟ ಗಂಧಮಾದನೇಶ್ವರ ಲಿಂಗ ಮತ್ತು ಶುದ್ಧ ಸ್ಫಟಿಕಲಿಂಗ ಇವುಗಳು ದರ್ಶನಯೋಗ್ಯವೂ ಪವಿತ್ರವೂ ಆಗಿವೆ.

ರಾಮೇಶ್ವರ ದೇವಾಲಯದ ದಕ್ಷಿಣಭಾಗದಲ್ಲಿ ಪರ್ವತವರ್ಧಿನಿ ಎಂದು ಕರೆಯಲ್ಪಡುವ ಪಾರ್ವತಿದೇವಿಯ ಮಂದಿರವಿದೆ.

ದೇವಾಲಯದ ಪಶ್ಚಿಮದ್ವಾರದಿಂದ ನೇರವಾಗಿ ಸಾಗಿದಾಗ ಮಾಧವತೀರ್ಥವನ್ನು ಕಾಣುತ್ತೇವೆ. ಈ ಕಲ್ಯಾಣಿಯಲ್ಲಿ ಮಿಂದು ಸೇತುಮಾಧವನ ದರ್ಶನಮಾಡಬಹುದು.

ರಾಮೇಶ್ವರದ ಮುಖ್ಯಮಂದಿರದ ಪ್ರದಕ್ಷಿಣ ಮಾರ್ಗ ಅತ್ಯದ್ಭುತ! ಸಾವಿರಶಿಲಾಸ್ತಂಭಗಳುಳ್ಳ ಪಡಸಾಲೆ (ಕಾರಿಡಾರ್) ಭಾರತದ ದೇಗುಲಗಳಲ್ಲೇ ಅತಿ ಉದ್ದವಾಗಿದ್ದು ಇದರ ವಾಸ್ತುಶಿಲ್ಪ ವಿಶ್ವವಿಖ್ಯಾತವಾಗಿದೆ.

### ರಾಮೇಶ್ವರ ದೇವಾಲಯದ ಸುತ್ತಮುತ್ತಲಿರುವ ಪವಿತ್ರಕ್ಷೇತ್ರಗಳು

**೧) ಗಂಧಮಾದನ ಪರ್ವತ** : ಇದೊಂದು ಚಿಕ್ಕ ಬೆಟ್ಟ. ಮೇಲೇರಿ ಹೋದರೆ ಶ್ರೀರಾಮಚಂದ್ರನ ಪವಿತ್ರ ಪಾದಗಳ ಚಿಹ್ನೆಯುಳ್ಳ ದೇವಾಲಯವನ್ನು ದರ್ಶಿಸಬಹುದು. ಆಂಜನೇಯ ಸ್ವಾಮಿ ಈ ಬೆಟ್ಟದಿಂದಲೇ ಸಮುದ್ರಮಾರ್ಗವಾಗಿ ಲಂಕೆಗೆ ಹಾರಿದುದು. ಅನಂತರ ಹನುಮನು ಹಿಂದಿರುಗಿದಮೇಲೆ ಸೇತು ಬಂಧನದ ಬಗ್ಗೆ ಶ್ರೀರಾಮನು ಸುಗ್ರೀವಾದಿಗಳೊಡನೆ ಇದೇ ಸ್ಥಳದಲ್ಲಿ ಚರ್ಚಿಸಿದುದೆಂದು ಪ್ರತೀತಿ. ಈ ಬೆಟ್ಟದ ಅಡಿಯಲ್ಲಿ ಹಾಗೂ ಸುತ್ತಮುತ್ತಲೂ ಅನೇಕ ಪವಿತ್ರ ಕೂಪಗಳೂ, ತೀರ್ಥಗಳೂ, ಸರೋವರಗಳೂ ಇವೆ.

**೨) ಪಾಂಡವ ತೀರ್ಥಗಳು** : ದ್ವಾಪರಯುಗದಲ್ಲಿ ಪಂಚ ಪಾಂಡವರು ಈ ಕ್ಷೇತ್ರಕ್ಕೆ ಬಂದಿದ್ದರ ಕುರುಹಾಗಿ ಯುಧಿಷ್ಠಿರನು ಸ್ಥಾಪಿಸಿದ ಧರ್ಮತೀರ್ಥ, ಭೀಮತೀರ್ಥ, ಅರ್ಜುನತೀರ್ಥ, ನಕುಲತೀರ್ಥ, ಸಹದೇವತೀರ್ಥ ಹಾಗೂ ದ್ರೌಪದೀತೀರ್ಥಗಳಿವೆ. ಇದರ ಸಮೀಪವೇ ಇರುವ ಭದ್ರಕಾಳಿ ದೇಗುಲದಲ್ಲಿ ವಿಜಯ ದಶಮಿಯಂದು ರಾಮೇಶ್ವರ ದೇವಾಲಯದಿಂದ ತರುವ ಗಣೇಶ, ಸ್ಕಂದ ಹಾಗೂ ರಾಮೇಶ್ವರನ ಉತ್ಸವಮೂರ್ತಿಗಳು ಪೂಜಿಸಲ್ಪಡುವುವು. ಇದರೊಡನೆ ಶಮೀವೃಕ್ಷವನ್ನೂ ಪೂಜಿಸಲಾಗುವುದು.

**೩) ಕೋದಂಡರಾಮಸ್ವಾಮಿ ದೇಗುಲ** : ರಾಮೇಶ್ವರದಿಂದ ಸಮುದ್ರತೀರದಲ್ಲೇ ಐದು ಮೈಲಿಗಳ ದೂರ ಸಾಗಿದರೆ ಕೋದಂಡ ರಾಮಸ್ವಾಮಿಯ ಪುಟ್ಟ ಮಂದಿರವನ್ನು ಕಾಣಬಹುದು. ಶ್ರೀ ರಾಮನು ವಿಭೀಷಣನಿಗೆ ರಾಜತಿಲಕವನ್ನು ಹಚ್ಚಿ ಲಂಕೆಗೆ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿದ ಸ್ಥಳ ಇದು ಎನ್ನುತ್ತಾರೆ. ಇದು ಅತ್ಯಂತ ರಮಣೀಯವಾದ ಸ್ಥಳ.

**೪) ಧನುಷ್ಕೋಟಿ** : ಸ್ಕಂದಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿರುವ ಈ ತೀರ್ಥಸ್ಥಳ, ರಾಮೇಶ್ವರದಿಂದ ಮೂರು ಮೈಲಿಯ ನಡಿಗೆಯ ಅಂತರದಲ್ಲಿದೆ.

ಲಂಕಾವಿಜಯದನಂತರ ಶ್ರೀರಾಮಚಂದ್ರಪ್ರಭು ಪುಷ್ಪಕವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಹಿಂದಿರುಗುವಾಗ ವಿಭೀಷಣನು ಈ ಧನುಷ್ಕೋಟಿಯ ಬಳಿ ರಾಮನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾ ''ಪ್ರಭು, ನೀನು ಕಟ್ಟಿದ ಈ ಸೇತುವನ್ನು ಉಪಯೋಗಿಸಿಕೊಂಡು ಅನೇಕ ಪ್ರತಾಪೀ ರಾಜರು ಲಂಕೆಗೆ ಆಕ್ರಮಣ ಮಾಡಬಹುದು. ಆದ್ದರಿಂದ ಈ ಸೇತುವನ್ನು ಧ್ವಂಸ ಮಾಡಿ ಉಪಕರಿಸು'' ಎಂದು ಪ್ರಾರ್ಥಿಸಿದಾಗ ಶ್ರೀರಾಮ ಪುಷ್ಪಕದಿಂದಿಳಿದು ಬಂದು ಈ ಸ್ಥಳದಲ್ಲಿ ತನ್ನ ಧನುಸ್ಸಿನ ಕೋಟಿ(ತುದಿ)ಯಿಂದ ಸೇತುವನ್ನು ಭಂಗ ಮಾಡಿ ಸಮುದ್ರದಲ್ಲಿ ಮುಳುಗಿಸಿದ ಸ್ಥಳವಾದ್ದರಿಂದ ಈ ಕ್ಷೇತ್ರಕ್ಕೆ 'ಧನುಷ್ಕೋಟಿ' ಎಂಬ ಹೆಸರಾಯಿತು.

ಈ ಪವಿತ್ರ ಕ್ಷೇತ್ರದಲ್ಲಿ ಭಕ್ತರು ಪಿತೃಗಳಿಗೆ ಪಿಂಡಪ್ರದಾನ ಮಾಡುವುದೂ ಉಂಟು. ಬೆಳ್ಳಿಯ ಧನುರ್ಬಾಣಗಳನ್ನು ದಾನವಾಗಿ ಕೊಡುವುದೂ ಉಂಟು.

**೫. ದರ್ಭಶಯನ :** ರಾಮನಾಥಪುರದಿಂದ ಆರು ಮೈಲಿಗಳ ಅಂತರದಲ್ಲಿ ದರ್ಭಶಯನ ಕ್ಷೇತ್ರವಿದೆ. ಈ ದೇಗುಲ ಸುಂದರವೂ ವಿಶಾಲವೂ ಆಗಿದೆ. ಗರ್ಭಗೃಹದಲ್ಲಿ ದರ್ಭಶಯ್ಯೆಯಲ್ಲಿ ಮಲಗಿರುವ ಶ್ರೀರಾಮನ ದ್ವಿಭುಜ ಶ್ರೀವಿಗ್ರಹವಿದೆ. ವಿಭೀಷಣನ ವಚನಾನುಸಾರ ಶ್ರೀರಾಮ ಲಂಕೆಗೆ ಹೊರಡುವ ಮುನ್ನ, ಕುಶಾಸನದಲ್ಲಿ ಕುಳಿತು, ಲಂಕೆಗೆ ಮಾರ್ಗವನ್ನು ತೋರಿಸಲು ಸಮುದ್ರ ರಾಜನನ್ನು ಕುರಿತು ಮೂರುದಿನಗಳ ವ್ರತ ಮಾಡಿದುದು ಈ ದರ್ಭಶಯನ ಕ್ಷೇತ್ರದಲ್ಲೇ ಎನ್ನುತ್ತದೆ ಸ್ಥಳಮಹಿಮೆ.

**೬. ನವಪಾಷಾಣ :** ಇಲ್ಲಿ ಸಮುದ್ರ ತೀರದಲ್ಲಿ ಒಂಭತ್ತು ಕಲ್ಲಿನ ಸ್ತಂಭಗಳಿವೆ. ಶ್ರೀರಾಮನು ಸೇತುಬಂಧಕಾರ್ಯ ಪ್ರಾರಂಭಿಸುವ ಮೊದಲು ಇಲ್ಲಿ ನವಗ್ರಹಗಳಿಗೆ ಪೂಜೆ ಮಾಡಿದುದರ ಪ್ರತೀಕ ಈ ನವಪಾಷಾಣಗಳು ಎನ್ನುತ್ತಾರೆ. ಯಾತ್ರಿಕರು ಇಲ್ಲಿನ ಚಕ್ರತೀರ್ಥದಲ್ಲಿ ಮಿಂದು ನವಗ್ರಹಸ್ತಂಭಗಳಿಗೆ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡುತ್ತಾರೆ.

### ರಾಮೇಶ್ವರದಲ್ಲಿ ಶ್ರೀಮಾತೆ ಶಾರದಾದೇವಿ

ಇಂತಹ ಅತಿ ಪವಿತ್ರ ತೀರ್ಥಕ್ಷೇತ್ರವನ್ನು ದರ್ಶಿಸದ ಮಹಾಪುರುಷರಿಲ್ಲ. ಶ್ರೀಮಾತೆ ಶಾರದಾದೇವಿಯವರು ದಕ್ಷಿಣಭಾರತದ ತಮ್ಮ ಪ್ರವಾಸದಲ್ಲಿ, ಮದರಾಸಿನಲ್ಲಿ ತಂಗಿದ್ದು ಮದುರೈಕ್ಷೇತ್ರ ದರ್ಶನದ ಬಳಿಕ ರಾಮೇಶ್ವರಕ್ಕೆ ಹೊರಡುತ್ತಾರೆ. ರೈಲಿನಲ್ಲಿ ಮಂಡಪಂ ವರೆಗೆ ಬಂದು, ಪಾಂಬನ್‌ವರೆಗೆ ಸ್ಟೀಮರ್‌ನಲ್ಲಿ ಬಂದು ಅಲ್ಲಿಂದ ಮತ್ತೆ ರೈಲಿನಲ್ಲಿ ರಾಮೇಶ್ವರವನ್ನು ರಾತ್ರಿ ೧೧ ಘಂಟೆಗೆ ತಲುಪುತ್ತಾರೆ. ಈ ಪ್ರಯಾಣ ಅವರಿಗೆ ಆಯಾಸವನ್ನುಂಟುಮಾಡಿದರೂ ಅಲ್ಲಿನ ಅರ್ಚಕರಾಗಿದ್ದ ಗಂಗಾರಾಮ ಪೀತಾಂಬರ ಎನ್ನುವವರು ಶ್ರೀಮಾತೆಯವರಿಗೆ ವಿಶ್ರಾಂತಿಯ ವ್ಯವಸ್ಥೆ ಮಾಡಿರುತ್ತಾರೆ. ಶ್ರೀಮಾತೆ ಮಾರನೆಯದಿನ ಸಮುದ್ರ ಸ್ನಾನವನ್ನು ಮಾಡಿ ರಾಮೇಶ್ವರನ ಸನ್ನಿಧಿಗೆ ಹೊರಡುತ್ತಾರೆ. ರಾಮನಾಡಿನ ರಾಜನ ಆಣತಿಯ ಮೇರೆಗೆ ಶ್ರೀಮಾತೆಯವರಿಗೆ ರಾಮೇಶ್ವರನ ಗರ್ಭಗುಡಿಯೊಳಗೆ ಪ್ರವೇಶ ಸಿಗುತ್ತದೆ. ಅಲ್ಲಿ ಅವರು ಶಿವಲಿಂಗಕ್ಕೆ ಗಂಗಾಜಲದಿಂದ ಅಭಿಷೇಕ ಮಾಡಿ, ಸ್ವಾಮಿ ರಾಮಕೃಷ್ಣಾನಂದರು ತರಿಸಿದ್ದ ೧೦೮ ಬಂಗಾರದ ಬಿಲ್ವಪತ್ರಗಳಿಂದ ಅರ್ಚನೆ ಮಾಡುತ್ತಾರೆ. ಶ್ರೀಮಾತೆಯವರು ಈ ಕ್ಷೇತ್ರದಲ್ಲಿ ಮೂರು ದಿನಗಳ ಕಾಲ ತಂಗಿದ್ದು, ಪ್ರತಿದಿನವೂ ಅಲ್ಲಿನ ಪೂಜಾದಿಗಳನ್ನು

ನೋಡಿ, ಮಹಾಮಂಗಳಾರತಿಯನಂತರ ನಡೆಯುವ ಪಲ್ಲಕ್ಕಿ ಉತ್ಸವವನ್ನು ನೋಡಿ ಆನಂದಿಸುತ್ತಾರೆ. ಅಲ್ಲಿಂದ ಹೊರಟುಬರುವಾಗ ದೇವಾಲಯದ ಅರ್ಚಕರಿಗೆ ಜಲಕಲಶಗಳನ್ನು ಉಡುಗೊರೆಯಾಗಿ ಕೊಡುತ್ತಾರೆ.

ಶ್ರೀಮಾತೆಯವರಿಗೆ ಧನುಷ್ಕೋಟಿಗೆ ಹೋಗಲಾಗದಿದ್ದ ಕಾರಣ ಅವರು ಧೀರಾನಂದ ಮತ್ತು ಆಶುವನ್ನು ಅವರ ಪರವಾಗಿ ಅಲ್ಲಿ ಪೂಜೆ ಸಲ್ಲಿಸಲು ಕಳುಹಿಸಿ, ಅಲ್ಲಿನ ಪದ್ಧತಿಯಂತೆ ಬೆಳ್ಳಿಯ ಧನುಸ್ಸು ಮತ್ತು ಬಾಣವನ್ನು ದಾನವಾಗಿ ಕೊಡುತ್ತಾರೆ.

ಮುಂದೊಮ್ಮೆ ಶ್ರೀಮಾತೆಯವರು ತಮ್ಮ ರಾಮೇಶ್ವರ ಪ್ರವಾಸದ ಬಗ್ಗೆ ಹೇಳುತ್ತಾ, ರಾಮೇಶ್ವರನ ಮೂಲವಿಗ್ರಹದ ಬಗ್ಗೆ ''ನಾನು ಆ ಶಿವಲಿಂಗವನ್ನು ಅಂದು ಪ್ರತಿಷ್ಠಾಪಿಸಿದಾಗ ಹೇಗಿತ್ತೋ ಈಗಲೂ ಹಾಗೆಯೇ ಇದೆ''ಎಂದು ಉದ್ಗರಿಸುತ್ತಾರೆ. ರಾಮಾವತಾರದಲ್ಲಿ ಇವರು ಸೀತೆಯಲ್ಲವೆ !!

### ರಾಮೇಶ್ವರದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಕನ್ಯಾಕುಮಾರಿಯಲ್ಲಿ ತಮ್ಮ ಜೀವನದ ಮುಂದಿನ ಕಾರ್ಯಗಳ ಬಗ್ಗೆ ಮುಖ್ಯನಿರ್ಧಾರವನ್ನು ಕೈಗೊಂಡ ಬಳಿಕ ಅಲ್ಲಿಂದ ಮುಂದೆ ಮಧುರೈಯಲ್ಲಿ ದೇವಿ ಮೀನಾಕ್ಷಿಯ ದರ್ಶನ ಮಾಡಿ, ರಾಮೇಶ್ವರಕ್ಕೆ ಬಂದು, ರಾಮನಾಡಿನ ಅಂದಿನ ಸಮರ್ಥ ಅರಸ ಭಾಸ್ಕರ ಸೇತುಪತಿಯನ್ನು ಭೇಟಿ ಮಾಡುತ್ತಾರೆ. ಅಮೆರಿಕೆಯಲ್ಲಿ ನಡೆಯಲಿದ್ದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿ ಭಾಗವಹಿಸಿದರೆ ಭಾರತದ ಅಮೂಲ್ಯ ಆಧ್ಯಾತ್ಮಿಕತೆಯೆಡೆಗೆ ಸಮಸ್ತ ವಿಶ್ವದ ಗಮನ ಸೆಳೆಯಲು ಒಂದು ಸದವಕಾಶವೆಂದು ಭಾವಿಸಿದ ಸೇತುಪತಿ ರಾಜ ಧನಸಹಾಯವನ್ನು ಮಾಡಲೂ ಮುಂದಾಗುತ್ತಾನೆ. ಆದರೆ ಸ್ವಾಮೀಜಿ ತಮ್ಮ ದಕ್ಷಿಣ ಭಾರತದ ಯಾತ್ರೆಯನ್ನು ಮುಗಿಸಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿ ಅರಸನಿಂದ ಬೀಳ್ಕೊಂಡು ರಾಮೇಶ್ವರ ದೇವಾಲಯಕ್ಕೆ ಬಂದು, ಸಮುದ್ರಸ್ನಾನ ಮಾಡಿ ಪರಶಿವನ ದರ್ಶನ, ಅರ್ಚನ ಪೂಜನಾದಿಗಳನ್ನು ಮಾಡುತ್ತಾರೆ.

### ರಾಮೇಶ್ವರದಲ್ಲಿ ಸ್ವಾಮಿ ಬ್ರಹ್ಮಾನಂದರು

೧೯೦೮ ರಲ್ಲಿ ಸ್ವಾಮಿ ಬ್ರಹ್ಮಾನಂದರು ಮದರಾಸಿಗೆ ಬಂದಿದ್ದಾಗ, ಸ್ವಾಮಿ ರಾಮಕೃಷ್ಣಾನಂದರೊಡನೆ ದಕ್ಷಿಣಭಾರತದ ಕೆಲವು ತೀರ್ಥಕ್ಷೇತ್ರಗಳನ್ನು ದರ್ಶಿಸುತ್ತಾರೆ. ರಾಮೇಶ್ವರಕ್ಕೆ ಬಂದಾಗ ರಾಮನಾಡಿನ ರಾಜರ ಅತಿಥಿಗಳಾಗಿ ಮೂರುದಿನ ಉಳಿಯುತ್ತಾರೆ. ಅಲ್ಲಿಗೆ ಹೋದಾಗ ಮೊದಲು ರಾಮೇಶ್ವರ ಶಿವನ ದರ್ಶನ ಮಾಡುತ್ತಾರೆ. ತಾವು ವಾರಾಣಸಿಯಿಂದ ತಂದಿದ್ದ ಗಂಗಾವಾರಿಯನ್ನು ಬಳಸಿ ಸ್ವಾಮಿ ರಾಮಕೃಷ್ಣಾನಂದರೊಡನೆ ರಾಮೇಶ್ವರನನ್ನು ವಿಧ್ಯುಕ್ತವಾಗಿ ಪೂಜಿಸುತ್ತಾರೆ.

## ೯. ಕನ್ಯಾಕುಮಾರಿ ಕ್ಷೇತ್ರ

ಮಹಾಭಾರತದ ವನಪರ್ವದಲ್ಲಿ ಕನ್ಯಾಕುಮಾರಿ ಕ್ಷೇತ್ರದ ಮಾಹಾತ್ಮ್ಯ ಬರುತ್ತದೆ. ಈ ತೀರ್ಥ ಸ್ಪರ್ಶದಿಂದಲೇ ಮಾನವ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ ಎನ್ನುತ್ತಾರೆ ಭಗವಾನ್ ವ್ಯಾಸ ಮಹರ್ಷಿಗಳು. ಈ ಕ್ಷೇತ್ರವನ್ನು ಕನ್ಯಾತೀರ್ಥ ಎಂದೂ ಕರೆಯುತ್ತಾರೆ. ಸುಮಾರು ೨೦೦೦ ವರ್ಷಗಳ ಹಿಂದೆ ಕನ್ಯಾರೂಪದ ಜಗನ್ಮಾತೆಗೆ ಅರ್ಪಿಸಿದ ಪುಣ್ಯದೇಗುಲವಿದು.

ಕನ್ಯಾಕುಮಾರಿ ಭಾರತದ ದಕ್ಷಿಣದ ಅಂತಿಮ ಸೀಮಾಪ್ರದೇಶ. ಜಗನ್ಮಾತೆ ಕನ್ಯಾಕುಮಾರಿಯ ಪಾದಸ್ಪರ್ಶಕ್ಕಾಗಿ ನಾಮುಂದು ತಾಮುಂದು ಎಂದು ಅರಬ್ಬಿ ಸಮುದ್ರ, ಬಂಗಾಳ ಕೊಲ್ಲಿ ಮತ್ತು ಹಿಂದು ಮಹಾಸಾಗರ ಮೂರೂ ಸಮುದ್ರಗಳು ಧಾವಿಸಿ ಬರುತ್ತಿರುವವೋ ಎಂಬಂತಿದೆ ಈ ಮಹಾದ್ಭುತ ತಾಣ! ಈ ಮೂರು ಸಮುದ್ರಗಳ ಮಿಲನದ ತಾಣದಲ್ಲಿ ಚೈತ್ರಶುದ್ಧಪೂರ್ಣಿಮೆಯಂದು ಬಂಗಾಳಕೊಲ್ಲಿಯಲ್ಲಿ ಚಂದ್ರೋದಯ ಹಾಗೂ ಅರಬ್ಬಿ ಸಮುದ್ರದಲ್ಲಿ ಸೂರ್ಯಾಸ್ತವಾಗುವ ಅದ್ಭುತ ದೃಶ್ಯವನ್ನು ಯಾತ್ರಿಕರು ಕಣ್ತುಂಬಿಕೊಳ್ಳುತ್ತಾರೆ. ಇದಲ್ಲದೆ ಸಮುದ್ರದ ಮೇಲೆ ಸೂರ್ಯೋದಯ ಹಾಗೂ ಸೂರ್ಯಾಸ್ತವಾಗುವ ಪ್ರಕೃತಿಯ ಸುಂದರ ದೃಶ್ಯವನ್ನು ಇಲ್ಲಿ ಪ್ರತಿದಿನವೂ ದರ್ಶಿಸಬಹುದು.

ಹಿಂದೆ ಬಾಣಾಸುರನೆಂಬ ರಕ್ಕಸನು ಶಿವನನ್ನು ಕುರಿತು ಕಠಿಣ ತಪಸ್ಸನ್ನು ಮಾಡಿ ಅಮರತ್ವವನ್ನು ಯಾಚಿಸಲು ಪರಮೇಶ್ವರನು ಕುಮಾರಿ ಕನ್ಯೆಯಿಂದ ಹೊರತು ಉಳಿದವರಾರಿಂದಲೂ ನಿನಗೆ ಸಾವು ಬಾರದು ಎಂಬ ವರಪ್ರದಾನ ಮಾಡುತ್ತಾನೆ. ಈ ವರವನ್ನು ಪಡೆದ ಬಾಣಾಸುರನು ಮೂರು ಲೋಕಗಳಿಗೂ ಹಿಂಸೆ ಮಾಡತೊಡಗಿದಾಗ ದೇವತೆಗಳು ವಿಷ್ಣುವಿನ ಮೊರೆಹೋಗುತ್ತಾರೆ. ಮಹಾವಿಷ್ಣುವು ದೇವತೆಗಳಿಗೆ ಒಂದು ಯಜ್ಞವನ್ನು ಮಾಡಲು ಆದೇಶವೀಯುತ್ತಾನೆ. ಈ ಯಜ್ಞದ ಕುಂಡದಿಂದ ಆದಿಶಕ್ತಿದುರ್ಗೆಯ ಅಂಶದಿಂದ ಕನ್ಯಾರೂಪವೊಂದು ಪ್ರಕಟವಾಗುತ್ತದೆ. ಈ ಕನ್ಯಾಕುಮಾರಿ ಶಿವನನ್ನೇ ಪತಿಯನ್ನಾಗಿ ಪಡೆಯಲು ದಕ್ಷಿಣಸಮುದ್ರದಲ್ಲಿ ಕಠಿಣ ತಪಸ್ಸನ್ನು ಆಚರಿಸತೊಡಗುತ್ತಾಳೆ. ಈ ಕನ್ಯೆಯ ಅನುಪಮ ಸೌಂದರ್ಯದ ಪ್ರಶಂಸೆಯನ್ನು ತನ್ನ ಅನುಚರರಿಂದ ಪಡೆದ ಬಾಣಾಸುರ ಇವಳ ಬಳಿಗೆ ಬಂದು ತನ್ನನ್ನು ವರಿಸುವಂತೆ ಬಹಳವಾಗಿ ಪೀಡಿಸತೊಡಗುತ್ತಾನೆ. ಕ್ರುದ್ಧಳಾದ ದೇವಿ ಬಾಣಾಸುರನನ್ನು ಸಮರದಲ್ಲಿ ಸೋಲಿಸಿ ಸಂಹಾರಮಾಡುತ್ತಾಳೆ. ದೇವಿಯು ಪುನಃ ಶಿವನನ್ನು ಕುರಿತು ತಪೋನಿರತಳಾಗುತ್ತಾಳೆ.

ಭಾರತದ ೫೧ ಶಕ್ತಿಪೀಠಗಳಲ್ಲಿ ಅಗ್ರಸ್ಥಾನದಲ್ಲಿರುವ ಈ ದೇಗುಲದಲ್ಲಿ , ದೇವಿಯ ದರ್ಶನಕ್ಕೆ ಅನೇಕ ದ್ವಾರಗಳನ್ನು ದಾಟಿ ಒಳಕ್ಕೆ ಹೋಗಬೇಕು. ಭವ್ಯವೂ ಅತ್ಯಂತ ಪ್ರಭಾವಪೂರ್ಣವೂ ಆದ ಭಗವತಿಯ ದಿವ್ಯಮಂಗಳವಿಗ್ರಹವು ವಜ್ರಾದಿ ರತ್ನಗಳ ದಿವ್ಯಾಭರಣಗಳಿಂದ ಭೂಷಿತವಾಗಿ ನಯನಮನೋಹರವಾಗಿ ಕಂಗೊಳಿಸುತ್ತಿದೆ. ಇಲ್ಲಿ ದೇವಿಯು ದ್ವಿಭುಜಳು. ಒಂದು ಕೈಯಲ್ಲಿ ಅಕ್ಷಮಾಲೆಯನ್ನು ಹಿಡಿದು ತಪೋಭಂಗಿಯಲ್ಲಿ ನಿಂತಿದ್ದಾಳೆ. ಇವಳ ಪಾದಪೀಠದಲ್ಲಿರುವ ಸಿಂಹದ ಕೆತ್ತನೆಯು ಇವಳು ದುರ್ಗೆ ಎಂಬುದನ್ನು ಪ್ರತಿಪಾದಿಸುತ್ತಿದೆ. ಈ ದೇವಿಯನ್ನು ಬಾಲಾಂಬಿಕೆ ಎಂದೂ, ನವದುರ್ಗೆಯರಲ್ಲಿ ಒಂದಾದ ಕಾತ್ಯಾಯನಿ ಎಂದೂ ತಾಂತ್ರಿಕ ಪೂಜೆಯಲ್ಲಿ ಭದ್ರಕಾಳಿ ಎಂದೂ ಕರೆಯುತ್ತಾರೆ.

ಈ ದೇವಾಲಯದಲ್ಲಿ ವಿಶೇಷವಾದ ನಾಲ್ಕು ಸ್ತಂಭಗಳಿವೆ. ಅವುಗಳನ್ನು ತಟ್ಟಿನೋಡಿದಾಗ ವೀಣೆ, ಮೃದಂಗ, ವೇಣು ಮತ್ತು ಜಲತರಂಗ ವಾದ್ಯಗಳ ಧ್ವನಿಯನ್ನು ಹೊರಡಿಸುವುದು ಇಲ್ಲಿನ ಶಿಲ್ಪಕಲಾನೈಪುಣ್ಯದ ಒಂದು ಪ್ರಮುಖಾಂಶ.

**ಈ ದೇಗುಲದಲ್ಲಿ ಇತರ ಪ್ರೇಕ್ಷಣೀಯ ಸ್ಥಳಗಳು :** ಪಾತಾಳ ಗಂಗೆ ತೀರ್ಥ, ನಿಮಿಷ ಎಂದು ಕರೆಯಲ್ಪಡುವ ಕಾಲಭೈರವನ ಗುಡಿ, ಸಂಗೀತಸೇವೆ ನಡೆಸುವ ನವರಾತ್ರಿ ಮಂಟಪ, ಸಮುದ್ರದ ಸುತ್ತಲೂ ಇರುವ ೧೧ ತೀರ್ಥಗಳು.

ಈ ಸಾಗರಸಂಗಮ ಕ್ಷೇತ್ರದಲ್ಲಿ ಪಿತೃತರ್ಪಣವನ್ನೂ ನೀಡುತ್ತಾರೆ.

ಈ ಕ್ಷೇತ್ರದ ಮಂತ್ರ :

**ಓಂ ಕಾತ್ಯಾಯನಾಯ ವಿದ್ಮಹೇ ಕನ್ಯಕುಮಾರಿ ಧೀಮಹಿ ।**
**ತನ್ನೋ ದುರ್ಗಿಃ ಪ್ರಚೋದಯಾತ್ ॥**

## ವಿವೇಕಾನಂದ ಶಿಲೆ : ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದ

ಕನ್ಯಾಕುಮಾರಿಯ ಮತ್ತೊಂದು ಆಕರ್ಷಕ ಸ್ಥಳ ಸ್ವಾಮಿ ವಿವೇಕಾನಂದರು ಸಮುದ್ರದಲ್ಲಿ ಬಂಡೆಯೊಂದರ ಮೇಲೆ ಕುಳಿತು ತಪಸ್ಸು ಮಾಡಿದ ತಾಣ. ಸಮುದ್ರದ ಸ್ನಾನಘಟ್ಟದಿಂದ ದೂರದಲ್ಲಿ ಕಾಣುವ ದೊಡ್ಡ ಬಂಡೆಯೇ ಶ್ರೀಪಾದಶಿಲೆ. ಶಿವನನ್ನು ಒಲಿಸಿಕೊಳ್ಳಲು ಕನ್ಯಾಕುಮಾರಿ ತಪಗೈದ ಪುಣ್ಯಶಿಲೆ. ಇಲ್ಲಿ ಒಂದು ಪುಟ್ಟ ಮಂಟಪದಲ್ಲಿ ದೇವಿಯ ಶ್ರೀಪಾದವನ್ನು ಪೂಜಿಸುತ್ತಾರೆ. ಸ್ವಾಮಿ ವಿವೇಕಾನಂದರು ೧೮೯೨ ಡಿಸೆಂಬರ್ ತಿಂಗಳಲ್ಲಿ ಕನ್ಯಾಕುಮಾರಿಗೆ ಆಗಮಿಸಿದಾಗ ಸಮುದ್ರದಲ್ಲಿ ಬಹಳ ದೂರದವರೆಗೆ ಈಜಿಕೊಂಡು ಹೋಗಿ ಶ್ರೀಪಾದಶಿಲೆಯ ಎದುರಿರುವ ಬಂಡೆಯ ಮೇಲೆ ಕುಳಿತು ಮೂರುದಿನಗಳ ಕಾಲ ತಪಸ್ಸು ಮಾಡಿ, ಆತ್ಮಚಿಂತನೆ ನಡೆಸುತ್ತಾರೆ. ತಾವು ಪರಿವ್ರಾಜಕರಾಗಿ ಸಂಚರಿಸಿ ಬಂದ ಇಡೀ ಭಾರತದ ಚಿತ್ರ ಅವರ ಕಣ್ಣಮುಂದೆ ಮೂಡಿಬರುತ್ತದೆ. ಭಾರತವನ್ನು ವಿಶ್ವದಲ್ಲೇ ಅತ್ಯಂತ ಎತ್ತರಕ್ಕೆ ನಿಲ್ಲಿಸಿ ಬೆಳಗಿಸಲು ತಾವು ವಿದೇಶಗಳಿಗೆ ಹೋಗಿ ತಮ್ಮ ಮುಂದಿನ ಗುರಿಯನ್ನು ಸಾಧಿಸಲು ತಮ್ಮ ಗುರುವಿನ ಆದೇಶವನ್ನು ಪಡೆಯುತ್ತಾರೆ. ಭಾರತದ ಪ್ರಾಚೀನ ಋಷಿಗಳ ಅಮರ ಸಂದೇಶವನ್ನು ಪಾಶ್ಚಾತ್ಯರ ಮುಂದೆ ಭವ್ಯವಾಗಿ ಪ್ರಸ್ತುತಪಡಿಸಿ, ಭಾರತದ ಘನತೆಯನ್ನು ಮುಗಿಲೆತ್ತರಕ್ಕೆ ನಿಲ್ಲಿಸುವುದು ಅವರ ಪರಮೋದ್ದೇಶವಾಗಿತ್ತು. ಈ ಸ್ಥಳದಲ್ಲಿ ಈಗ ಒಂದು ಭವ್ಯದೇಗುಲದ ನಿರ್ಮಾಣವಾಗಿದೆ. ಆಳೆತ್ತರದ ಲೋಹದ ಪೀಠದಮೇಲೆ ಸ್ಥಾಪಿಸಲ್ಪಟ್ಟಿರುವ ಸ್ವಾಮೀಜಿಯವರ ಭವ್ಯವಾದ ಕಂಚಿನ ವಿಗ್ರಹ ಯಾತ್ರಿಕರನ್ನು ಆಕರ್ಷಿಸುತ್ತಿದೆ.



## ಕನ್ಯಾಕುಮಾರಿಯಲ್ಲಿ ಸ್ವಾಮಿ ಬ್ರಹ್ಮಾನಂದರು

ಶ್ರೀರಾಮಕೃಷ್ಣರ ಮಾನಸಪುತ್ರರೆಂದೇ ವಿಖ್ಯಾತರಾದ, ರಾಮಕೃಷ್ಣ ಮಹಾಸಂಘದ ಪ್ರಥಮಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ೧೯೧೬ರಲ್ಲಿ ಪುನಃ ದಕ್ಷಿಣಭಾರತ ಯಾತ್ರೆ ಕೈಗೊಂಡಿದ್ದಾಗ ಕನ್ಯಾಕುಮಾರಿ ಕ್ಷೇತ್ರಕ್ಕೂ ಆಗಮಿಸಿದ್ದರು. ಅವರಿಗಾದ ದೇವಿಯ ದರ್ಶನವನ್ನು ಅವರ ಮಾತುಗಳಿಂದಲೇ ಕೇಳೋಣ : ''ಕನ್ಯಾಕುಮಾರಿಯಲ್ಲಿ ಆನಂದೋದ್ರೇಕವನ್ನು ತಡೆಯಲಾರದಾದೆ. ಕಿಲಕಿಲನೆ ನಗುತ್ತಿದ್ದ ೮-೧೦ ವರ್ಷದ ಬಾಲಕಿಯಾಗಿ ದೇವಿ ಅಲ್ಲಿ ನನಗೆ ದರ್ಶನ ಕೊಟ್ಟಳು. ಅದೆಂತಹ ಸುಂದರ, ತೇಜೋಮಯ, ಜೀವಂತ ರೂಪ !''

## ಉಪಸಂಹಾರ

ತೀರ್ಥಯಾತ್ರೆ ಮಾಡುವವರು ಸಾತ್ತ್ವಿಕ ಬುದ್ಧಿಯಿಂದ ಕೇವಲ ಭಗವತ್ಪ್ರಾಪ್ತಿಗಾಗಿಯೇ ಮಾಡಬೇಕು. ಲೋಕದಲ್ಲಿರುವ ಎಲ್ಲ ತೀರ್ಥಗಳು ಭಗವಂತ ಅಥವಾ ಅವನ ಪರಮಭಕ್ತರ ಪ್ರಭಾವವನ್ನು ಹೊಂದಿವೆ. ನಶ್ವರವಾದ ಇಹಲೋಕದ ಸುಖವನ್ನು ಬಯಸದೆ ಶಾಶ್ವತ ಆನಂದಪ್ರಾಪ್ತಿಗಾಗಿ ಯಾತ್ರೆ ಮಾಡಬೇಕು. ಪರಮಾತ್ಮನ ಮತ್ತು ಅವನ ಪರಮ ಭಕ್ತರ ಸಾನ್ನಿಧ್ಯದಿಂದ ಪುನೀತವಾಗಿರುವ ಇಂತಹ ಕ್ಷೇತ್ರದರ್ಶನದಿಂದ ನಮಗೆ ಅಪಾರ ಲಾಭವಿದೆ. ತೀರ್ಥಯಾತ್ರೆ ಮಾಡುವವರು ಕಾಮಕ್ರೋಧಾದಿ ಆರು ಶತ್ರುಗಳಿಂದ ದೂರವಿರಬೇಕು. ಭಗವಾನ್ ಶ್ರೀರಾಮಕೃಷ್ಣರು ಹೇಳುವಂತೆ ಕಾಮ ಭಗವತ್ಕಾಮವಾಗಬೇಕು, ತನ್ನ ದೋಷ ದುರ್ಗುಣಗಳ ಬಗ್ಗೆ ಕ್ರೋಧವಿರಬೇಕು, ಭಗವಂತನ ಭಜನೆಯ ಬಗ್ಗೆ ಲೋಭವಿರಬೇಕು, ಭಗವಂತನ ಮಹಿಮೆಗಳ ವಿಚಾರದಲ್ಲಿ ಮೋಹವಿರಬೇಕು. ಅಹಂಕಾರ ದಾಸ ಅಹಂ ಆಗಬೇಕು. ಇವೆಲ್ಲ ಸದ್ಗುಣಗಳನ್ನು ಹೊಂದಿದವರು ತೀರ್ಥಯಾತ್ರೆ ಮಾಡಿದಾಗ ಅದರ ಪೂರ್ಣಫಲ ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ ಎನ್ನುತ್ತಾರೆ ಮಹಾಪುರುಷರು.

ತೀರ್ಥಯಾತ್ರೆ ಮಾಡಲು ಆಗದೆಯೇ ಇರುವವರಿಗೆ ಸ್ಕಾಂದ ಪುರಾಣವು ಹೀಗೆ ಹೇಳುತ್ತದೆ :

**ಸತ್ಯಂ ತೀರ್ಥಂ ಕ್ಷಮಾ ತೀರ್ಥಂ ತೀರ್ಥಮಿಂದ್ರಿಯನಿಗ್ರಹಃ ।**
**ಸರ್ವಭೂತದಯಾ ತೀರ್ಥಂ ತೀರ್ಥಂ ಚ ಪ್ರಿಯವಾದಿತಾ ॥** ✽

*ಗ್ರಂಥಋಣ :*

*೧. ತೀರ್ಥಾಂಕ್ (ಹಿಂದಿ)-ಗೀತಾ ಪ್ರೆಸ್, ಗೋರಖ್‌ಪುರ್*
*೨. ಶ್ರೀಶಾರದಾದೇವಿ ಅಂಡ್ ಹರ್ ಡಿವೈನ್ ಪ್ಲೇ (ಇಂಗ್ಲೀಷ್) – ಸ್ವಾಮಿ ಚೇತನಾನಂದ*
*೩. ದೇವರೊಡನೆ ಬಾಳಿದವರು– ಸ್ವಾಮಿ ಚೇತನಾನಂದ*
*೪. ಸಂಕ್ಷಿಪ್ತ ಹಿಂದೂಧರ್ಮ ವಿಶ್ವಕೋಶ (ಇಂಗ್ಲೀಷ್) –ಸ್ವಾಮಿ ಹರ್ಷಾನಂದ*